


ಕಲ್ಯಾಣ ಕಿರಣ

ಜನವರಿ-ಫೆಬ್ರವರಿ-2017 ಬೆಲೆ-೨೦



ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಂದ
ಬಸವ ಧರ್ಮ ಪೀಠದ ಪೀಠಾರೋಹಣ



30ನೇ ಶರಣ ಮೇಳದ ಉದ್ಘಾಟನಾ ಸಮಾರಂಭದ ವೇದಿಕೆ



ಪೂಜ್ಯ ಮಾತಾಜಿಯವರ 72ನೆಯ ವರ್ಧಂತಿ
ದಿ.19-03-2017ರಂದು ಆಚರಣೆ

ಬೆಂಗಳೂರು ನಗರದ ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ದಿ.12-03-2017ರಂದು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ 72ನೆಯ ವರ್ಧಂತಿ ಆಚರಿಸಲಾಗುವುದು ಎಂದು ಕಲ್ಯಾಣ ಕಿರಣದ ಒಳಪುಟದಲ್ಲಿ ಕೊಡಲಾಗಿದೆ. ಆದರೆ ಅಂದು ಪುರಭವನ ಲಭ್ಯವಿಲ್ಲ. ಆದ್ದರಿಂದ ಕಾರ್ಯಕ್ರಮವನ್ನು ಭಾನು(ದೇವ)ವಾರ ದಿ.19-03-2017ರಂದು ಆಚರಿಸಲಾಗುತ್ತಿದೆ. ದಿ.13-3-2017ರಂದು ಬಸವ ಮಂಟಪದಲ್ಲಿ ವಿಶೇಷ ಪೂಜೆ ಮಾಡಲಾಗುವುದು. ದಿ.19-03-2017ರಂದು ಬೆಳಿಗ್ಗೆ 10.30ಕ್ಕೆ ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಆಚರಿಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ, ಕೂಡಲ ಸಂಗಮ

ಯೋಗಿರಾಜ ಪೊರೆಯಯ್ಯ

ಗುರು ಶಿವನೆ ನಾ ನಿನ್ನ ಅನುದಿನವು ನೆನೆಯುವೆನು
ಪೊರೆಯಯ್ಯ ಮಹಾಯೋಗಿ ಮಂತ್ರ ಪುರುಷ ॥ ಪಲ್ಲವಿ ॥

ಅಂತರಾತ್ಮದಿ ದಿಟ್ಟಿ ಅನವರತ ನೀನಿಟ್ಟು
ಅನಿಮಿಷ ನೇತ್ರನು ಆಗಿ ನೀ ಮೆರೆದೆ.
ಯೋಗಿಗಳ ಸ್ಫೂರ್ತಿಯು ಆಗಿ ನೀನಿಹೆಯಯ್ಯ । ಈ
ಜಗದ ಪ್ರಪ್ರಥಮ ಯೋಗಿರಾಜ ॥ 1 ॥

ಧಿಮಿತಕಿಟ ಧಿಮಿತಕಿಟ ಹೆಜ್ಜೆಯಂ ಹಾಕುತ್ತಾ
ತಾಳ ಮದ್ದಳೆ ಸಹಿತ ನೀನು ಕುಣಿದೆ
ನಾಟ್ಯ ಶಾಸ್ತ್ರವ ಜಗಕೆ ನೀನಿತ್ತು ಮೆರೆದೆ
ನಟರಾಜ ನೀನೆಂಬ ಖ್ಯಾತಿ ಪಡೆದೆ ॥ 2 ॥

ಗಾನ ಗಂಗೆಯ ಹರಿಸಿ ನಾದಯೋಗಿಯು ಆದೆ
ಕಾಮನಂ ನೀನುರುಹಿ ವಿರಾಗಿಯಾದೆ ॥
ಭಸಿತ- ರುದ್ರಾಕ್ಷಿಗಳೆ ಆಭರಣವಾಗಿರಲು
ಸರಳ ವ್ರತ ಧರಿಸಿರುವ ಮಹತ್ಯಾಗಿಯಾದೆ ॥ 3 ॥

ಶರಣು ಬಂದವರಿಗೆ ಅಭಯ ಹಸ್ತವ ನೀಡಿ
ಮೂಲಿಗನು ನೀನಾದೆ ಶಿವಭಕ್ತಿ ಪಥಕೆ
ನೀನು ತಪಗೈಯ್ದ ದಿನ ಶಿವರಾತ್ರಿಯಾಯಿತ್ತು
ಬನ್ನಗಳ ತಾ ತೊಡೆದು ಭವಬಾಧೆ ಹರಿಯಿತ್ತು. ॥ 4 ॥

ಈ ಜಗದ ಪ್ರಪ್ರಥಮ ಯೋಗಿರಾಜನೆನಿಸಿ
ಮಡದಿ ಪಾರ್ವತಿಗೆ ಯೋಗವಿದ್ಯೆಯ ಕಲಿಸಿ
ಓಂಕಾರ ವಿಭೂತಿ ರುದ್ರಾಕ್ಷಿ ಹೊಂದಿದ
ಪಥವ ನೀಡಿದ ಶಿವಗೆ ಶರಣು ಸಲ್ಲಿಸುವೆ ॥ 5 ॥

-ಮಾತಾಜಿ

ಸಂಪುಟ-48 ಬಸವ ಶಕೆ -882 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-01-2 ಜನವರಿ-ಫೆಬ್ರವರಿ-2017 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಫೆಬ್ರವರಿ -ಮಾರ್ಚ್‌ದಲ್ಲಿ ಬರುವ ಹಬ್ಬ ಹುಣ್ಣಿಮೆಗಳು

1. ಚನ್ನಹುಣ್ಣಿಮೆ(ಉಳವಿಯಲ್ಲಿ ರಥೋತ್ಸವ) – ಫೆಬ್ರವರಿ–10
2. ಮಹಾಶಿವರಾತ್ರ, ಸರ್ವಶರಣರ ದಿನ – ಫೆಬ್ರವರಿ–24
3. ಪೂಜ್ಯ ಮಾತಾಜಿಯವರ ವರ್ಧಂತಿ – ಮಾರ್ಚ್ 13
4. ಚಾಂದ್ರಮಾನ ಯುಗಾದಿ – ಮಾರ್ಚ್ 28
5. ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳ – ಮಾರ್ಚ್–28, 29, 30

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, Basava Mantapa Road, 2nd Block, Rajajinagar, Bengaluru-560010. Phone : 080-23131476, Send SMS to 9945806297





ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಅಲ್ಲಮ ಪ್ರಭು ಗಿರಿಯಲ್ಲಿ 2017ರ ಮಾರ್ಚ್ 28, 29 ಮತ್ತು 30 ರಂದು ಹನ್ನೆರಡನೆಯ ಲಿಂಗಾಯತ ಗಣಮೇಳ

ಶರಣ ಬಂಧುಗಳಲ್ಲಿ ಶರಣು ಶರಣಾರ್ಥಿ,

ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಸಂಸ್ಥೆಯನ್ನು ಕಟ್ಟಿ, ಅದರಲ್ಲಿ ಶೂನ್ಯಪೀಠ ಎಂಬ ಧರ್ಮಪೀಠವನ್ನು ಸ್ಥಾಪಿಸಿ ಅದಕ್ಕೆ ವ್ಯೋಮಕಾಯ ಸಿದ್ಧರಾದ ಅಲ್ಲಮ ಪ್ರಭುದೇವರನ್ನು ಮೊದಲನೆಯ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಿದರು. ಶ್ರೀ ಅಲ್ಲಮ ಪ್ರಭುದೇವರು ಮತ್ತು ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರು ಧರ್ಮ ಪ್ರಚಾರಾರ್ಥ ಇಂದಿನ ಕರ್ನಾಟಕ, ಮಹಾರಾಷ್ಟ್ರದ ವಿವಿಧ ಸ್ಥಳಗಳಲ್ಲೆಲ್ಲ ಗಂಗೆ-ಯಮುನೆಯರಂತೆ ಸಂಚರಿಸಿ ಭಕ್ತರನ್ನು ಉದ್ಧರಿಸಿದ್ದಾರೆ. ಜೊತೆಗೂಡಿ ಸಂಚರಿಸಿದ ಉಭಯತರೂ ಒಂದು ವಿಶಿಷ್ಟ ಸ್ಥಳದಿಂದ ಪರಸ್ಪರ ಬೀಳ್ಕೊಟ್ಟು ಸಾಭಾರಿ ಜಂಗಮರಾದ ಶ್ರೀ ಸಿದ್ಧರಾಮೇಶ್ವರರು ಸೊಲ್ಲಾಪುರಕ್ಕೆ ಕರ್ತವ್ಯ ಮುಖಿ ಯಾಗಿ ವಾಪಸ್ಸು ಹೊರಡುತ್ತಾರೆ. ನಿರಾಭಾರಿ ಜಂಗಮರಾದ ಶ್ರೀ ಅಲ್ಲಮ ಪ್ರಭುದೇವರು ಅಶ್ವಾರೋಹಿಯಾಗಿ ಶಿಷ್ಯರೊಡನೆ ಸಂಚಾರವನ್ನು ಮುಂದುವರಿಸುತ್ತಾರೆ. ಒಂದು ಸ್ಥಳದಲ್ಲಿ ತಪೋಮಗ್ನರಾಗಿ ತಂಗಿರುತ್ತಾರೆ. ಅದೇ ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಬಳಿ ಇರುವ ಅಲ್ಲಮ ಪ್ರಭು ಗಿರಿ. ಮರಾಠಿಯಲ್ಲಿ ಅಲ್ಲಮ ಪ್ರಭು ಡೋಂಗರ್ ಎನ್ನುತ್ತಾರೆ. ಇದು ಕೊಲ್ಹಾಪುರದಿಂದ 25 ಕಿ.ಮೀಟರ್ ದೂರದಲ್ಲಿ ಕೊಲ್ಹಾಪುರ -ಸಾಂಗ್ಲಿ-ಸೊಲ್ಲಾಪುರ ಹೆದ್ದಾರಿಯ ಮೇಲಿದೆ. ಸಮೀಪದಲ್ಲಿ ಇಚಲ ಕರಂಜಿ, ಮೀರಜ್, ಸಾಂಗ್ಲಿ ಮತ್ತು ವಡಗಾಂವ ಪಟ್ಟಣಗಳು ಇವೆ. ಮೀರಜ್‌ವರೆಗೆ ರೇಲ್ವೆ ಸೌಲಭ್ಯವಿದೆ. ಪ್ಯಾಸೆಂಜರ್ ರೇಲ್ವೆ ಗಾಡಿಗಳು ಹಾತ್ ಕಣಂಗಲೆ ಮೂಲಕ ಕೊಲ್ಹಾಪುರಕ್ಕೆ ಹೋಗುತ್ತವೆ ಮತ್ತು ಹಾತ್‌ಕಣಂಗಲೆ ಯಲ್ಲಿ ನಿಲ್ಲುತ್ತವೆ.

ಅಲ್ಲಮ ಪ್ರಭು ನಂದಾದೀಪ

ಶ್ರೀ ಅಲ್ಲಮ ಪ್ರಭುದೇವರು ಪೂಜೆಯ ಸಮಯದಲ್ಲಿ ಹಚ್ಚಿದ ಜ್ಯೋತಿಯನ್ನು ಅಲ್ಲಮ ಪ್ರಭು ಶರಣಾಲಯದ ಪೂಜಾರಿ ವಂಶಸ್ಥರು ನಂದಾದೀಪವಾಗಿ ಕಾಯ್ದುಕೊಂಡು ಬಂದಿರುವುದು ಸ್ಥಳ ವಿಶೇಷ. ಶ್ರೀ ಸಿದ್ಧರಾಮೇಶ್ವರರ ಶರಣಾಲಯವು ಸಹ ಪಕ್ಕದಲ್ಲೇ ಇದ್ದು ಕೆಲವು ಕಾಲ ಅವರು ಸಹ ಈ ಗಿರಿಯಲ್ಲಿ ತಂಗಿದ್ದಾರೆ. ಈ ಉಭಯತರೂ ಪೂಜೆ-ಧ್ಯಾನಗಳಿಗೆ ಬಳಸುತ್ತಿದ್ದ ಗವಿಯು ಶ್ರೀ ಸಿದ್ಧರಾಮೇಶ್ವರ ಶರಣಾಲಯದ ಕೆಳಗೆ ಇದೆ. ಅಲ್ಲಮ ಪ್ರಭುಗಿರಿಗೆ ಸುಮಾರು 4 ಕಿ.ಮೀ ದೂರದಲ್ಲಿ ಸಿದ್ಧರಾಮೇಶ್ವರ ಗಿರಿ (ಸಿದ್ದೋಬಾ ಡೋಂಗರ್)ಇದ್ದು ಎತ್ತರವಾದ ಆ ಗುಡ್ಡದ ಮೇಲೆ ಸಹ ಸಿದ್ಧರಾಮೇಶ್ವರ ಶರಣಾಲಯವಿದೆ. ಈ ಜಂಗಮ ಕ್ಷೇತ್ರಗಳು ಹೆಚ್ಚಿನ ಪ್ರಚಾರವನ್ನು ಪಡೆಯದೆ ಇರುವುದು ಮತ್ತು ಯಾವುದೇ ವಿಶೇಷ ಅಭಿವೃದ್ಧಿ ಹೊಂದದಿರುವುದು ವಿಷಾದನೀಯ ಸಂಗತಿಯಾಗಿದೆ.

ಬಸವ ಧರ್ಮ ಪೀಠದ ಧ್ಯೇಯೋದ್ದೇಶ

ಕೂಡಲ ಸಂಗಮದ ಬಸವ ಧರ್ಮ ಪೀಠ ಟ್ರಸ್ಟ್ ಶರಣರ ಸ್ಥಾನಗಳನ್ನು ಅಭಿವೃದ್ಧಿ ಪಡಿಸುವ

ಆಶಯವನ್ನು ಹೊಂದಿದ್ದ ಅಲ್ಲಮ ಪ್ರಭು ಗಿರಿ(ಡೋಂಗರ್)ಯಲ್ಲಿ ಜಗದ್ಗುರು ಅಲ್ಲಮಪ್ರಭು ಶರಣಾಲಯಕ್ಕೆ ಹತ್ತಿರದಲ್ಲಿ 14 ಎಕರೆಯಷ್ಟು ಜಮೀನನ್ನು ಖರೀದಿಸಿದೆ. ಬೋರ್ ವೆಲ್, ನೀರಿನ ತೊಟ್ಟಿ, ಕಾರ್ಯಾಲಯ (*Office*) ಮತ್ತು ವಾಸಕ್ಕೆ 3 ಕೊಠಡಿ, ಒಂದು ಹಾಲ್ ಸಹ ಕಟ್ಟಿಸಲಾಗಿದೆ. ಈ ಸದ್ಯ ಪ್ರತಿ ಅಮವಾಸ್ಯೆಯಂದು ಶರಣ ಸಂಗಮ -ಪ್ರಾರ್ಥನೆ ಮತ್ತು ಅನುಭವ ಗೋಷ್ಠಿಯನ್ನು ನಡೆಸಲಾಗುತ್ತಿದ್ದು ಸುತ್ತಲಿನ ಪ್ರದೇಶದಿಂದ ಶರಣ ಬಂಧುಗಳು ಅಲ್ಲಮ ಗಿರಿಗೆ ಬರುತ್ತಾರೆ. ಮುಂದೆ ವಿಸ್ತಾರವಾದ ಕಾರ್ಯ ಯೋಜನೆಯ ಮಾಸ್ಟರ್ ಪ್ಲಾನ್ ಪ್ರಕಟಿಸಲಾಗುವುದು ಮತ್ತು ಕಟ್ಟಡ ನಿಧಿಗೆ, ದಾಸೋಹ ನಿಧಿಗೆ ದೇಣಗೆಯನ್ನು ಸಂಗ್ರಹಿಸಲಾಗುವುದು.

ಅಲ್ಲಮಪ್ರಭು ಯೋಗ ಪೀಠಾರೋಹಣ ಸಂಜೆ 5ಕ್ಕೆ

ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಮತ್ತು ಕಾಯಕ ಯೋಗಿ ಸಿದ್ಧರಾಮೇಶ್ವರರು ಪಾದವಿಟ್ಟ ಈ ಜಂಗಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕೆಂದು, ಲಿಂಗಾಯತ ಸಮಾಜದ ಸಂಘಟನೆಯ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಬಸವ ಧರ್ಮಪೀಠದ ಶಾಖೆಯೊಂದನ್ನು ಹೊಂದುವುದು ತೀರಾ ಅತ್ಯಗತ್ಯ ಎಂಬ ಮಹಾರಾಷ್ಟ್ರ ಶರಣ ಬಂಧುಗಳ ಬೇಡಿಕೆಯಂತೆ 2006ನೇ ಇಸವಿಯ ಚೈತ್ರ ಶುದ್ಧ ಪ್ರತಿಪದೆ ಯುಗಾದಿಯ ದಿನ ಅಲ್ಲಮಪ್ರಭು ಪೀಠಾರೋಹಣ ಸಂಸ್ಮರಣ ದಿನಕ್ಕೆ ಹೊಂದಿಕೊಂಡು ಮಾರ್ಚ್ ತಿಂಗಳಿನ 29 ಮತ್ತು 30ನೆಯ ದಿನಾಂಕಗಳಂದು ಪ್ರಥಮ ಲಿಂಗಾಯತ ಗಣ ಮೇಳವನ್ನು ಏರ್ಪಡಿಸಲಾಯಿತು.

ಕೂಡಲ ಸಂಗಮದ ಬಸವ ಧರ್ಮಪೀಠ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಅಲ್ಲಮ ಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ನಡೆಸಲಾಗುವುದು. ದಿ.28-3-2017 ಬೆಳಿಗ್ಗೆ 10.30ಕ್ಕೆ -ಉದ್ಘಾಟನೆ, ಮಧ್ಯಾಹ್ನ - ಚಿಂತನಗೋಷ್ಠಿ, ಸಂಜೆ -ಪ್ರವಚನ, ಸಾಮೂಹಿಕ ಕೀರ್ತನ(ಭಜನೆ), ಅಲ್ಲಮಪ್ರಭು ತೊಟ್ಟಿಲು ಕಾರ್ಯಕ್ರಮ ಶನಿವಾರ ದಿ.29-3-17ರಂದು ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ, ಬೆಳಿಗ್ಗೆ 10-30ರಿಂದ ಸಮುದಾಯ ಪ್ರಾರ್ಥನೆ - ಸಿದ್ಧರಾಮೇಶ್ವರ ಗಿರಿಯಿಂದ ಜ್ಯೋತಿಯನ್ನು ತಂದು ತಿರುಗುತ್ತಿಯಿಂದ ಮೆರವಣಿಗೆ ಮೂಲಕ ಗುಡಿಗೆ ಹೋಗಲಾಗುವುದು. ನಂತರ ಅಲ್ಲಮ ಪ್ರಭು ಯೋಗ ಪೀಠಾರೋಹಣ ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳವರಿಂದ ಭಾನುವಾರ ದಿ.30-3- 2017 ರಂದು ಬೆಳಿಗ್ಗೆ 10-30 ಕ್ಕೆ ಲಿಂಗಾಯತ ಗಣ ಮೇಳದ ಸಮಾರೋಪ ಸಮಾರಂಭ.

ಸ್ಥಳದ ಹೆಸರು: ಅಲ್ಲಮ ಪ್ರಭು ಗಿರಿ(ಡೋಂಗರ್), ಗ್ರಾಮ: ಆಳತೆ; ಇದು ಕೊಲ್ಹಾಪುರದಿಂದ ಸಾಂಗ್ಲಿಗೆ ಹೋಗುವ ದಾರಿಯ ಮೇಲೆ ಕೇವಲ 25 ಕಿ.ಮೀಟರ್ ದೂರದಲ್ಲಿ ಇದೆ. ಸುಪ್ರಸಿದ್ಧ ಕೈಗಾರಿಕಾ ನಗರ ಇಚಲ ಕರಂಜಿಯಿಂದಲೂ 20 ಕಿ.ಮೀಟರ್ ದೂರದಲ್ಲಿದೆ. ಈ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೈನರ ಸುಪ್ರಸಿದ್ಧ ಯಾತ್ರಾಸ್ಥಳಗಳಾದ ಕುಂತಗಿರಿ ಮತ್ತು ಬಾಹುಬಲಿ ಬೆಟ್ಟವಿದೆ. ವಡಗಾಂವ ನಗರವೂ ಸಮೀಪದಲ್ಲಿದೆ. ಅಲ್ಲಮ ಪ್ರಭು ಗಿರಿ ಇರುವ ಆಳತೆ ಗ್ರಾಮವು ಹಾತ್‌ಕಣಂಗಲೆ ತಾಲ್ಲೋಕಿನಲ್ಲಿದ್ದು ಹಾತ್‌ಕಣಂಗಲೆಯವರೆಗೆ ರೇಲ್ವೆ ಲೈನ್ ಸೌಲಭ್ಯವಿದೆ. ಪ್ಯಾಸೆಂಜರ್ ಟ್ರೇನ್, ಹರಿಪ್ರಿಯ ಎಕ್ಸ್‌ಪ್ರೆಸ್ ಹಾತ್‌ಕಣಂಗಲೆಯಲ್ಲಿ ನಿಲುತ್ತವೆ. ಹಾತ್‌ಕಣಂಗಲೇ ಬಸ್‌ಸ್ಟಾಂಡ್ ಎದುರಿಗೆ ಉತ್ಸವ ಸಮಿತಿಯ ಕಾರ್ಯಾಲಯ ತೆರೆದಿದ್ದು ಊರಿಂದ ಬಂದವರು ಇಲ್ಲಿ ವಿಶ್ರಮಿಸಿಕೊಂಡು

ರಾಮಲಿಂಗಕ್ಕೆ ಹೋಗುವ ರಸ್ತೆಯಲ್ಲಿ ಅಲ್ಲಮಗಿರಿಗೆ ಬರಬಹುದಾಗಿರುತ್ತದೆ. ವಾಹನಗಳ ವ್ಯವಸ್ಥೆ ಇರುತ್ತದೆ.

ಕಾರ್ಯಕ್ರಮದ ಸಮಯದಲ್ಲಿ ಬೆಟ್ಟದ ಮೇಲೆ ವಸತಿ ವ್ಯವಸ್ಥೆಯನ್ನು ತಾತ್ಕಾಲಿಕ ಶಾಮಿಯಾನಾ ಟೆಂಟ್‌ಗಳಿಂದಲೇ ಮಾಡಬೇಕು. ಕೋಣೆಗಳ ವ್ಯವಸ್ಥೆ ಬೇಕಾದವರಿಗೆ ಇಚಲ ಕರಂಜಿ - 20 ಕಿ.ಮೀ ಮತ್ತು ಕೊಲ್ಹಾಪುರ 25 ಕಿ.ಮೀಟರ್ ದೂರದಲ್ಲಿರುವ ನಗರಗಳು. ಅಲ್ಲಿಂದ ಬರಲು ಹೋಗಲು ಬಸ್ ವ್ಯವಸ್ಥೆ ಇರುತ್ತದೆ. ಟೆಂಪೋ ಸಹ ಸಿಗುತ್ತವೆ. ದೂರದ ಊರುಗಳಿಂದ ಬರುವವರು ದಿ. 27ರ ಸಂಜೆಯೊಳಗೆ ಬರಬೇಕೆಂದು, ಹತ್ತಿರದ ಸ್ಥಳಗಳಿಂದ ಬರುವವರು 28ರ ಬೆಳಿಗ್ಗೆ 10-30ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗಬೇಕೆಂದು ವಿನಂತಿಸುತ್ತೇವೆ.

ಧನ ಸಹಾಯಕ್ಕೆ ಮನವಿ

ಮಾರ್ಚ್ 28,29 ಮತ್ತು 30ರಂದು ನಡೆಯುವ ಲಿಂಗಾಯತ ಗಣ ಮೇಳಕ್ಕೆ ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಉಪಾಹಾರದ ವೆಚ್ಚ ಭರಿಸುವವರು	:	25000	ರೂಗಳು ಮತ್ತು ಮೇಲೆ ಕೊಟ್ಟವರು
ಮಹಾಪೋಷಕರು	:	15000	ರೂ ಮತ್ತು ಮೇಲೆ ಕೊಟ್ಟವರು
ದಾನಿಗಳು	:	2000	ರೂ ಮತ್ತು ಮೇಲೆ ಕೊಟ್ಟವರು
ಪೋಷಕರು	:	10000	ರೂ ಮತ್ತು ಮೇಲೆ ಕೊಟ್ಟವರು
ಹಿತೈಷಿಗಳು	:	1000	ರೂ
ಉತ್ಸವ ಸಮಿತಿ ಸದಸ್ಯರು	:	500	ರೂ
ಪ್ರತಿನಿಧಿ ಶುಲ್ಕ	:	250	ರೂ

ಸ್ವಯಂ ಪ್ರೇರಣೆಯಿಂದ ಅವರವರ ಶಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡ ಬಹುದು. ಚೆಕ್ / ಡಿ.ಡಿ ಕಳಿಸುವವರು ಲಿಂಗಾಯತ ಗಣ ಮೇಳ ಉತ್ಸವ ಸಮಿತಿ, ಇಚಲ ಕರಂಜಿ ಶಾಖೆ ಎಂದು ಬರೆಸಬಹುದು ಅಥವಾ ಬಸವ ಮಹಾಮನೆ ಚಾರಿಟಬಲ್‌ಟ್ರಸ್ಟ್. ಎಂದಾದರೂ ಬರೆಸಬಹುದು.

ಪ್ರತಿ ವರ್ಷವೂ 1000 (ಒಂದು ಸಾವಿರ)ರೂ ಕೊಡುವ 770 ಜನ ಶರಣರ ಪಟ್ಟಿಯನ್ನು ಉತ್ಸವ ಸಮಿತಿಯವರು ಸಿದ್ಧಪಡಿಸುತ್ತಿದ್ದಾರೆ. ಸ್ವಯಂ ಪ್ರೇರಣೆಯಿಂದ ಯಾರು ಬೇಕಾದರೂ ತಮ್ಮ ಹೆಸರನ್ನು ಬರೆಸಬಹುದು..

ಸಂಪರ್ಕಿಸಬೇಕಾದ ವಿಳಾಸ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23131476/22923736

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ
ಲಿಂಗಾಯತ ಗಣಮೇಳಾವ ಉತ್ಸವ ಸಮಿತಿ
ಅಲ್ಲಮ ಪ್ರಭು ಗಿರಿ
ಆಳತೆ ಗ್ರಾಮ, ತಾ -ಹಾತ್‌ಕಣಂಗಲೆ
ಜಿ-ಕೊಲ್ಹಾಪುರ, ಮಹಾರಾಷ್ಟ್ರ ರಾಜ್ಯ
ದೂರವಾಣಿ : (0)9420585881

ಸಂಪಾದಕೀಯ

ಪೀಠಾರೋಹಣ ಸಂದೇಶ



30ನೆಯ ಶರಣ ಮೇಳದಲ್ಲಿ ಬಸವ ಧರ್ಮ ಪೀಠದ ಪೀಠಾರೋಹಣ ದಿ.13-1-2017ರಂದು ಜರುಗಿತು. ಈ ಪೀಠಾರೋಹಣದ ಸಂದೇಶವು ಮುಖ್ಯವಾಗಿ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡುವುದನ್ನು ಒಳಗೊಂಡಿತ್ತು. ಬಸವ ಧರ್ಮದ ಮಹಾಜಗದ್ಗುರು ಪೀಠವು ದಿ.13-01-1-1992ರಂದು ಸ್ಥಾಪನೆಯಾಯಿತು. ಪರಮ ಪೂಜ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಂದು ಪ್ರಥಮ ಪೀಠಾಧಿಕಾರಿಗಳಾಗಿ ಪೀಠವನ್ನು ಏರಿದರು. ಅವರು 30-6-1995ರಂದು ಲಿಂಗೈಕ್ಯರಾದ ಮೇಲೆ ಪೂಜ್ಯರ ಸದಿಚ್ಛೆಯಂತೆ ನಾನು ದಿ.13-01-1996ರಂದು 2ನೆಯ ಪೀಠಾಧಿಕಾರಿಯಾಗಿ ಪೀಠಾರೋಹಣ ಮಾಡಿದೆ. ಈ ವರ್ಷದ ಶರಣ ಮೇಳದಲ್ಲಿ ನಡೆದ ಪೀಠಾರೋಹಣದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರನ್ನು ಮುಂದಿನ ಪೀಠಾಧಿಕಾರಿಯನ್ನಾಗಿ ಮಾಡಿ ಪೀಠಾರೋಹಣ ಮಾಡಿಸಲಾಯಿತು.

ಮಾತೆ ಗಂಗಾದೇವಿಯವರು ಬೀದರ್ ಜಿಲ್ಲೆಯ ಚಟ್ನಳ್ಳಿ ಗ್ರಾಮದ ಶರಣ ಮಾಣಿಕ್ಯಪ್ಪ ಬೆಣ್ಣೆ ಮತ್ತು ಭಾಗೀರಥಮ್ಮ ಅವರ ಪುತ್ರಿ. ದಿ.16-9-1968ರ ಗಣೇಶ ಚತುರ್ಥಿಯಂದು ಜನಿಸಿದರು. ಅವರ ತಂದೆ ಶರಣ. ಮಾಣಿಕ್ಯಪ್ಪನವರು ಬಾಲ್ಯದಿಂದಲೂ ಅಧ್ಯಾತ್ಮಿಕ ಪ್ರವೃತ್ತಿಯವರು, ಸನ್ಯಾಸಿಯಾಗಬೇಕೆಂಬ ಹಂಬಲದವರು. ಆದರೆ ಅವರಿಗೆ ಬಲು ಬೇಗನೆ ತಾಯಿ ತಂದೆ ಮದುವೆ ಮಾಡಿಬಿಟ್ಟರು. ಹೀಗಾಗಿ ಅವರ ಆಸೆ ಪೂರ್ಣಗೊಳ್ಳಲಿಲ್ಲ. ಅವರ ಮಗಳು ಗಂಗಮ್ಮನ ಹಂಬಲವೂ ಅದೇ ಆದಾಗ ಕೇವಲ ಹದಿನೈದು ವರ್ಷದ ಬಾಲಕಿಯಾಗಿದ್ದಾಗ ನಮ್ಮ ಆಶ್ರಯಕ್ಕೆ ತಂದುಬಿಟ್ಟರು. ಚುರುಕು ಬುದ್ಧಿಯ ಗಂಗಮ್ಮ ನಿಷ್ಠೆಯಿಂದ ಸೇವೆ ಮಾಡಿದ್ದಲ್ಲದೆ ಬೇಗನೆ ಪ್ರವಚನದ ವಿಷಯಗಳನ್ನು ಗ್ರಹಿಸಿಕೊಂಡರು. ಅವರ ದೀರ್ಘಾವಧಿಯ ಸೇವೆಯನ್ನು, ತ್ಯಾಗವನ್ನು, ನಿಸ್ವಾರ್ಥತೆಯನ್ನು ಗಮನಿಸಿ ಈಗ ಮುಂದಿನ ಪೀಠಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಬಸವ ಧರ್ಮ ಪೀಠದ ಅಭಿಮಾನಿಗಳು ಪೂಜ್ಯ ಗಂಗಾ ಮಾತಾಜಿಯನ್ನು ಬಹಳ ಗೌರವಿಸುತ್ತಾರೆ. ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಒಬ್ಬ ಆದರ್ಶ ಜಂಗಮಮೂರ್ತಿ. ನಿಜ ಜಂಗಮನು ತನ್ನ ಪೂರ್ವಾಶ್ರಮದ ಜನರೊಡನೆ ಹೆಚ್ಚಿನ ಸಂಪರ್ಕ ಇಟ್ಟುಕೊಳ್ಳಬಾರದು. ಅವನದು ಸಾರ್ವಜನಿಕ ಜೀವನ. ಸಮಾಜದ ಹಣವನ್ನು ಬಳಸುವುದರಿಂದ ಅವರ ನಡೆ ಪಾರದರ್ಶಕವಾಗಿ ಇರಬೇಕು, ಪ್ರಾಮಾಣಿಕನಾಗಿರಬೇಕು. ಅದೇ ರೀತಿ ಪೂಜ್ಯ ಲಿಂಗಾನಂದ ಅಪ್ಪಾಜಿ ಬಾಳಿ ಬದುಕಿದರು. ಅವರು ಎಂದೂ ಎಲ್ಲಿಯೂ ವೈಯಕ್ತಿಕ ಆಸ್ತಿ ಮಾಡಿಕೊಳ್ಳಲಿಲ್ಲ. ಪೂರ್ವಾಶ್ರಮದ ಜನರೊಡನೆ ಸಂಪರ್ಕ ಇಟ್ಟುಕೊಳ್ಳಲಿಲ್ಲ. ಲೆಕ್ಕದ ವಿಷಯದಲ್ಲಿ ಬಹಳ ಚೊಕ್ಕ. ಪೂಜ್ಯ ಗಂಗಾ ಮಾತಾಜಿ ಇದೇ ರೀತಿ ನಡೆಯುತ್ತಿರುವವರು. ಧರ್ಮದ ಕಡೆಗೆ ಜನರು ಬರದಾಗ ಧರ್ಮವನ್ನೇ ಅವರೆಡೆಗೆ

ಒಯ್ಯಬೇಕು ಎಂಬ ಘೋಷಣೆಯೊಡನೆ ನಿರಂತರವಾಗಿ ಸಂಚರಿಸಿ ಧರ್ಮ ಪ್ರಸಾರ ಮಾಡಿದ ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಹಾಕಿದ ದಾರಿಯಲ್ಲಿ ಮುನ್ನಡೆಯುತ್ತಿರುವ ಪೂಜ್ಯ ಮಾತೆ ಗಂಗಾದೇವಿಯವರನ್ನು ಬಸವ ಧರ್ಮ ಪೀಠದ ಮೂರನೆಯ ಅಧಿಕಾರಿಯನ್ನಾಗಿ ಘೋಷಿಸಲಾಗಿದೆ. ಅವರ ನಂತರ ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು ನಾಲ್ಕನೆಯ ಪೀಠಾಧಿಕಾರಿಯಾಗಬೇಕು. ಹಳ್ಳದ ಮಾದಹಳ್ಳಿಯ ಶರಣ.ನಾಗರಾಜಪ್ಪನವರ ಮಗನಾದ ಮಾದೇಶ್ವರ ಸ್ವಾಮಿಗಳೂ ಈಗಾಗಲೇ ಕೂಡಲ ಸಂಗಮದಲ್ಲಿ ಇದ್ದುಕೊಂಡು ಸಂಸ್ಥೆಯನ್ನು ಸರ್ವಾಂಗವಾಗಿ ಬೆಳೆಸುತ್ತಿದ್ದಾರೆ. ಬಸವ ಭಾರತಿ ಪ್ರಾಥಮಿಕ, ಪೌಢಶಾಲೆ, ಪದವಿ ಪೂರ್ವ ಕಾಲೇಜುಗಳನ್ನು ಚೆನ್ನಾಗಿ ಬೆಳೆಸುತ್ತಿದ್ದಾರೆ; ಅನಾಥಾಲಯವನ್ನು ಚೆನ್ನಾಗಿ ನಡೆಸುತ್ತಿದ್ದಾರೆ. ಆದ್ದರಿಂದ ಅವರು ನಾಲ್ಕನೆಯ ಪೀಠಾಧಿಕಾರಿಯಾಗಬೇಕು. ಚನ್ನಬಸವಣ್ಣ ಎಂಬ ಮೂರು ವರ್ಷದ ಮಗುವನ್ನು ಐದನೆಯ ಅಧಿಕಾರಿಯನ್ನಾಗಿ ಆಯ್ಕೆ ಮಾಡಲಾಗಿದೆ. ಇದಿಷ್ಟು ಬಸವ ಧರ್ಮ ಪೀಠಕ್ಕೆ ಸಂಬಂಧಿಸಿದ ವಿಷಯ. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಗೆ ರುದ್ರಾಕ್ಷಿ ಕಿರೀಟ ಧರಿಸಿ, ಪೀಠದ ಮೇಲೆ ಕೂರಿಸಲಾಗಿದೆ.

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ಪೂಜ್ಯ ಶ್ರೀ ಸದ್ಗುರು ಮಾತೆ ಜ್ಞಾನೇಶ್ವರಿ ಅವರನ್ನು ಮೂರನೆಯ ಪೀಠಾಧಿಕಾರಿಯನ್ನಾಗಿ ಆಯ್ಕೆ ಮಾಡಲಾಗಿದೆ. ಶರಣೆ. ಈರಮ್ಮ ಮತ್ತು ಲಿಂ॥ ಶರಣ.ಮಾನಪ್ಪ ಬುಚಡಿ ಅವರ ಮಗಳಾಗಿ ಜ್ಞಾನೇಶ್ವರಿ ಅವರು ಬಿ.ಎ.ಬಿಎಡ್ ಪದವೀಧರರು. ಧಾರವಾಡದಲ್ಲಿ ಕಾಲೇಜಿನಲ್ಲಿ ಓದುವಾಗ ಪೂಜ್ಯ ಲಿಂಗಾನಂದ ಅಪ್ಪಾಜಿ ಮತ್ತು ನಮ್ಮ ಪ್ರವಚನ ಕೇಳಿ ವೈರಾಗ್ಯದ ಪ್ರೇರಣೆ ಪಡೆದಿದ್ದಾರೆ. ನಂತರ ಪ್ರೌಢಶಾಲೆಯ ಶಿಕ್ಷಕರಾಗಿ ಕಮಲಾಪುರದಲ್ಲಿ ಕೆಲಸ ಮಾಡುತ್ತ ಅದನ್ನು ಬಿಟ್ಟು ನಮ್ಮ ಆಶ್ರಯಕ್ಕೆ ಬಂದರು. ಅಂದಿನಿಂದಲೂ ನಿಸ್ವಾರ್ಥತೆಯಿಂದ ಸೇವೆಯನ್ನು ಮಾಡುತ್ತಿದ್ದಾರೆ. ಒಳ್ಳೆಯ ಪ್ರವಚನಕಾರರು ಅಹುದು. ಪೂಜ್ಯ ಜ್ಞಾನೇಶ್ವರಿಯ ನಂತರ ಪೂಜ್ಯ ಮಾತೆ ಸತ್ಯಾದೇವಿಯವರು ನಾಲ್ಕನೆಯ ಅಧಿಕಾರಿಯಾಗಬೇಕು. ಧಾರವಾಡದ ಮಲಕಿನಕೊಪ್ಪದ ಸಾವಿತ್ರಮ್ಮ ಮತ್ತು ಶರಣ ಬಸವಂತಪ್ಪನವರ ಮಗಳಾದ ಸತ್ಯಾದೇವಿ ಉತ್ತಮ ಪ್ರವಚನಕಾರರು, ಕ್ರಾಂತಿಕಾರಿ, ಒಳ್ಳೆಯ ಸಂಘಟಕರು. ಬಾಲ್ಯದಲ್ಲಿಯೇ ನಮ್ಮ ಆಶ್ರಯಕ್ಕೆ ಬಂದು ಉತ್ತಮ ರೀತಿಯಲ್ಲಿ ಪ್ರವಚನ ಮಾಡುತ್ತಾ ಬಹು ಜನಪ್ರಿಯರಾಗುತ್ತಿದ್ದಾರೆ.

ಚನ್ನಬಸವೇಶ್ವರ ಜ್ಞಾನಪೀಠವನ್ನು ಬಸವ ಗಂಗೋತ್ರಿಯಲ್ಲಿ ಸ್ಥಾಪಿಸಲಾಗಿದ್ದು ಅದಕ್ಕೆ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳನ್ನು ಮೊದಲನೆಯ ಪೀಠಾಧಿಕಾರಿಯನ್ನಾಗಿ ಮಾಡಲಾಗಿದೆ. ಇದೀಗ ಕಾರವಾರ ಜಿಲ್ಲೆಯ ಜೊಯಿಡಾ ತಾಲ್ಲೋಕಿನಲ್ಲಿರುವ ಉಳವಿಯಲ್ಲಿ ಜಮೀನನ್ನು ಖರೀದಿ ಮಾಡಲಾಗಿದ್ದು, ಅಲ್ಲಿ ಬಸವ ಮಹಾಮನೆ ಮತ್ತು ಬಸವ ಯೋಗ ಕೇಂದ್ರವನ್ನು ನಿರ್ಮಾಣ ಮಾಡಲಾಗುವುದು. ಅಲ್ಲಿಯೂ ಚನ್ನಬಸವೇಶ್ವರ ಜ್ಞಾನಪೀಠವನ್ನು ಸ್ಥಾಪಿಸಲಾಗಿದ್ದು ಇದಕ್ಕೆ ಸಹ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಅಧಿಕಾರಿಯಾಗುವರು. ಇವರು ಬೀದರ ಜಿಲ್ಲೆಯ ಖಟಕ ಚಿಂಚೋಳಿಯ ಶರಣ. ಮಲ್ಲಯ್ಯಸ್ವಾಮಿ ಥಾಕುಳಗೆ ಅವರ ಸುಪುತ್ರ

ಬಹು ಭಾಷಾ ವಿಶಾರದರು. ಬರವಣಿಗೆಯಲ್ಲಿ ಬಲ್ಲಿದರು. ಕೆಲವು ಕಾಲ ಕೆಂಪುನೆಲ ಎಂ ವಾರ ಪತ್ರಿಕೆಯನ್ನು ನಡೆಸಿದರು. ಒಳ್ಳೆಯ ಪ್ರವಚನಕಾರರಲ್ಲದೆ ಉತ್ತಮ ಸಂಘಟಕರು. ಅವರ ನಂತರ ಉಳವಿಯ ಪೀಠಕ್ಕೆ ಶರಣ. ಮಹೇಶ ಕಮತಗಿ ಮುಂದಿನ ಉತ್ತರಾಧಿಕಾರಿಯಾಗಬೇಕು. ಬೆಳಗಾವಿ ಜಿಲ್ಲೆಯ ಹೊಸೂರು ಗ್ರಾಮದ ಮಹೇಶ್, ತಾಯಿಗೆ ಒಬ್ಬನೆ ಮಗನಿದ್ದು ಅವರೂ ಮಗನನ್ನು ಸನ್ಯಾಸಿಯನ್ನಾಗಿ ಮಾಡಲು ಒಪ್ಪಿಗೆ ನೀಡಿದ್ದಾರೆ. ಈಗ ಆತ ಪಿಯುಸಿಯಲ್ಲಿ ಓದುತ್ತಿದ್ದು ಬಿಡುವಿನ ವೇಳೆಯಲ್ಲಿ ಪ್ರವಚನಗಳನ್ನು ನೀಡುತ್ತಿದ್ದಾನೆ.

ಬಸವ ಕಲ್ಯಾಣದಲ್ಲಿ ಅಲ್ಲಮಪ್ರಭು ಶೂನ್ಯಪೀಠವನ್ನು ಸ್ಥಾಪಿಸಲಾಗಿದ್ದು, ಇದಕ್ಕೆ ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿ ಅಧಿಕಾರಿಯಾಗಿದ್ದಾರೆ. ಚಳ್ಳಕೆರೆಯ ಲಿಂ॥ ಶರಣ. ಚಲುಮಪ್ಪ ಮತ್ತು ಶರಣೆ. ರತ್ನಮ್ಮನವರ ಮಗನಾದ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ, ಕಾಯಕ ಯೋಗಿ, ಒಳ್ಳೆಯ ಪ್ರವಚನಕಾರರು, ತ್ಯಾಗಿಗಳು, ನಿಸ್ವಾರ್ಥಿಗಳು. ಅವರ ನಂತರ ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು. ಅಲ್ಲಮಪ್ರಭು ಯೋಗ ಪೀಠಕ್ಕೆ ಅಧಿಕಾರಿಯಾಗಬೇಕು. ಅವರು ಐ.ಟಿ.ಐ ಮುಗಿಸಿಕೊಂಡು ನಮ್ಮ ಸಂಸ್ಥೆಗೆ ಬಂದು ನಂತರ ಎಂ.ಎ ಪದವೀಧರರಾಗಿದ್ದಾರೆ. ಉತ್ತಮ ಸಂಘಟಕರು, ಒಳ್ಳೆಯ ಪ್ರವಚನಕಾರರು ಮತ್ತು ಲೇಖಕರು. ಅನಾಥಾಲಯವನ್ನು ಅಚ್ಚುಕಟ್ಟಾಗಿ ನಡೆಸುತ್ತ ಜನಪ್ರಿಯರಾಗುತ್ತಿದ್ದಾರೆ.

ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಿಲೆ ತಾಲ್ಲೋಕಿನಲ್ಲಿರುವ ಅಲ್ಲಮಪ್ರಭು ಡೋಂಗರ್ ಮೇಲೆ ಸ್ಥಾಪಿಸಲಾಗಿರುವ ಅಲ್ಲಮಪ್ರಭು ಯೋಗಪೀಠಕ್ಕೆ ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿಯನ್ನು ಪೀಠಾಧಿಕಾರಿಯನ್ನಾಗಿ ಮಾಡಲಾಗಿದೆ. ಪೂಜ್ಯ ಬಸವಕುಮಾರ ಸ್ವಾಮಿಗಳು ಗೋಕಾಕಿನ ಮಲ್ಲಪ್ಪ ಗುಮಟಣ್ಣನವರ ಸುಪುತ್ರ, ಕಾಲೇಜಿನಲ್ಲಿ ನೌಕರಿ ಮಾಡುತ್ತಿದ್ದು ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಪ್ರವಚನ ಕೇಳಿ ಪ್ರೇರಿತರಾಗಿ ತ್ಯಾಗ ಜೀವನಕ್ಕೆ ಬಂದವರು. ಯೋಗದಲ್ಲಿ ಬಲ್ಲಿದರು, ಲಿಂಗಾಂಗಯೋಗ ಸಾಧಕರು. ಅಲ್ಲಮಗಿರಿಯಲ್ಲಿರುವ ಸಂಸ್ಥೆಯನ್ನು ಚನ್ನಾಗಿ ಬೆಳೆಸುತ್ತಿದ್ದಾರೆ. ಪ್ರತಿವರ್ಷ ಯುಗಾದಿ ಪಾಡ್ಯದಿಂದ ಮೂರು ದಿನಗಳ ಕಾಲ ಲಿಂಗಾಯತ ಗಣಮೇಳ ಇಲ್ಲಿ ನಡೆಯುತ್ತಿದೆ.

ಹೀಗೆ 30ನೆಯ ಶರಣಮೇಳದಲ್ಲಿ ಪೀಠಾಧಿಕಾರಿಗಳನ್ನು ಆಯ್ಕೆ ಮಾಡಿ ಘೋಷಿಸಲಾಗಿದೆ.

ಅಕ್ಕನ ಅಮರವಾಣಿ

ಭಾಗ– 37 – ಮಾತಾಜಿ

370. ಪರಮ ಸುಖಿ

ಬಸವಣ್ಣನೇ ಗುರು, ಪ್ರಭುದೇವರೆ ಲಿಂಗ
ಸಿದ್ಧರಾಮಯ್ಯನೆ ಜಂಗಮ
ಮಡಿವಾಳಯ್ಯನೆ ಎನ್ನ ಹೆತ್ತ ತಂದೆ
ಚನ್ನಬಸವಣ್ಣನೆನ್ನ ಪರಮಾರಾಧ್ಯರು
ಇನ್ನು ಸುಖಿಯಾದೆನು ಕಾಣಾ
ಚನ್ನ ಮಲ್ಲಿಕಾರ್ಜುನ ದೇವರ ದೇವಾ

ಭಾವಾರ್ಥ: ಅನುಭವ ಮಂಟಪಕ್ಕೆ ಆಗಮಿಸಿದ ಅಕ್ಕಮಹಾದೇವಿಯವರಿಗೆ ಜೀವನದ ಪರಿಪೂರ್ಣತೆಗೆ ಅಗತ್ಯವಾದ ಭಕ್ತಿ, ಜ್ಞಾನ, ಯೋಗ ಮತ್ತು ಆಧ್ಯಾತ್ಮ ಸಂಬಂಧಗಳನ್ನು ಅಲ್ಲಿನ ಪ್ರಮುಖರಲ್ಲಿ ಕಂಡುಕೊಳ್ಳುವ ಮೂಲಕ ಉದಯೋನ್ಮುಖ ಸಾಧಕರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಬದುಕಿನ ಸಾರ್ಥಕತೆಗಾಗಿ ನಿಶ್ಚಿತ ಗುರಿ ತೋರಲು ಧರ್ಮಪಿತ ಬಸವಣ್ಣನವರಿದ್ದಾರೆ. ಪರಮಾತ್ಮನ ಅರಿವು–ಅಚಾರ–ಅನುಭಾವಗಳನ್ನು ಅಳವಡಿಸಿಕೊಂಡು ಸಾಧಕರನ್ನು ತಮ್ಮ ಅರಿವಿನ ಬೆಳಕಿನಲ್ಲಿ ಮುನ್ನೆಡೆಯಲು ಪ್ರೋತ್ಸಾಹಿಸುವ ಪ್ರಭುದೇವರಿದ್ದಾರೆ. ಬಸವಯೋಗದ ಮರ್ಮವನ್ನು ಅರಿತ ಜ್ಞಾನಿ ಯೋಗಿ ಸಿದ್ಧರಾಮೇಶ್ವರರಿದ್ದಾರೆ. ಹೆತ್ತ ತಂದೆಯಂತೆ ಭಕ್ತಿ–ಪ್ರೀತಿ–ವಾತ್ಸಲ್ಯಗಳಿಂದ ಪೋಷಿಸುತ್ತಿರುವ ವೀರ ಗಣಾಚಾರಿ ಮಡಿವಾಳ ಮಾಚಿದೇವರಿದ್ದಾರೆ. ಇವರೆಲ್ಲರ ನಡುವೆ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಪರಮಾರಾಧ್ಯರಾಗಿ ಶೋಭಿಸುತ್ತಿದ್ದಾರೆ. ಇಂಥ ಮಹಾನುಭಾವರ ಸಾನಿಧ್ಯದ ಪರಿಣಾಮವಾಗಿ ನನಗೆ ಪರಮಸುಖ ಪ್ರಾಪ್ತಿಯಾಗಿದೆ.

ಸಾಧಕನು ತನ್ನ ಜೀವನದ ಉದಾತ್ತ ಉದ್ದೇಶ ಸಾಧನೆಗಾಗಿ ಪೂರ್ವಾಶ್ರಮದ ಸಂಬಂಧ ತೊರೆದು ಯೋಗ್ಯರಾದ ಗುರುಲಿಂಗಜಂಗಮ ಸಂಪರ್ಕಕ್ಕೆ ಬಂದ ನಂತರ ಪೂರ್ಣವಾಗಿ ತನ್ನನ್ನು ಅರ್ಪಿಸಿಕೊಂಡು ತನ್ಮಯ ಭಾವದಿಂದ ಸಾಧನೆಯಲ್ಲಿ ತೊಡಗಬೇಕೆಂಬ ಅಕ್ಕನವರ ಸಂದೇಶ ಇಲ್ಲಿ ಅಡಕವಾಗಿದೆ ಎನ್ನಲು ಅಡ್ಡಿಯಿಲ್ಲ.

371. ಬಸವ ಕರುಣೆಯ ಕಂದ

ಬಸವಣ್ಣ ಎನ್ನ ಭಕ್ತಿ ನಿಮ್ಮ ಧರ್ಮ,
ಎನ್ನ ಜ್ಞಾನ ಪ್ರಭುದೇವರ ಧರ್ಮ
ಎನ್ನ ಪರಿಣಾಮವೆ ಚನ್ನ ಬಸವಣ್ಣನ ಧರ್ಮ
ಇಂತೀ ಮೂವರು ಒಂದೊಂದ ಕೊಟ್ಟ ಕಾರಣ
ಎನಗೆ ಮೂರು ಭಾವವಾಯಿತ್ತು
ಈ ಮೂರು ನಿಮ್ಮಲ್ಲಿ ಸಮರ್ಪಿಸಿದ ಬಳಿಕ

ಎನಗಾವ ಜಂಜಡವಿಲ್ಲ
ಚನ್ನಮಲ್ಲಿಕಾರ್ಜುನ ದೇವರ ನೆನಹಿನಲ್ಲಿ
ನಿಮ್ಮ ಕರುಣದ ಶಿಶು
ನಾನು ಕಾಣಾ ಸಂಗನ ಬಸವಣ್ಣ.

ಭಾವಾರ್ಥ–ಈ ವಚನದಲ್ಲಿ ಬಸವಾದಿ ಪ್ರಮಥರ ಒಡನಾಟದಿಂದ ಹೆಚ್ಚಿಸಿಕೊಂಡ ಲಿಂಗಾನುಭಾವವನ್ನು ಅಕ್ಕ ಮಹಾದೇವಿಯವರು ಕೃತಜ್ಞತೆಯಿಂದ ಸ್ಮರಿಸುವುದನ್ನು ಕಾಣುತ್ತೇವೆ. ಅಂತೆಯೇ ಅವರು ಹೇಳುತ್ತಾರೆ ಗುರು ಬಸವತಂದೆಯವರಿಂದ ಸದ್ಭಕ್ತಿಯ ಮರ್ಮವನ್ನು ಅರಿತು, ಅಳವಡಿಸಿಕೊಂಡು ಆನಂದಿಸಿದೆ. ಯೋಗ ಸಾಧನೆಯ ಹಾದಿಯಲ್ಲಿ ಸದ್ಭಕ್ತಿಯೊಂದಿಗೆ ಸುಜ್ಞಾನವೂ ಸೇರಿವಾಗ ಮಾತ್ರ ನಿಶ್ಚಿತ ಗುರಿ ಮುಟ್ಟಲು ಸಾಧ್ಯ ಎಂದರಿತ ಶೂನ್ಯಪೀಠಾಧೀಶರಾದ ಅಲ್ಲಮ ಪ್ರಭುದೇವರು ನನಗೆ ದಣಿವಿಲ್ಲದ ಜ್ಞಾನ ಬೋಧೆ ಮಾಡಿದರು. ಇಂಥ ಭಕ್ತಿ ಮತ್ತು ಜ್ಞಾನವನ್ನು ಅಳವಡಿಸಿಕೊಂಡ ಪರಿಣಾಮವಾಗಿ ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಪ್ರಭಾವದಿಂದ ನಾನು ಸತ್ಪರಿಣಾಮಿಯಾಗಲು ಸಾಧ್ಯವಾಯಿತು. ಗುರು ಬಸವಣ್ಣನವರಿಂದ ಭಕ್ತಿ, ಪ್ರಭುದೇವರಿಂದ ಜ್ಞಾನ, ಚನ್ನಬಸವಣ್ಣನವರಿಂದ ಪರಿಣಾಮ ಪಡೆದ ಕಾರಣ ಈ ಮೂರು ಭಾವಗಳು ನನ್ನಲ್ಲಿ ಮಿಳಿತವಾಗಿ ಬೇರಾವ ಜಂಜಡಗಳು ನನಗಿಲ್ಲವಾದವು. ಹೀಗಾಗಿ ಸದಾ ಪರಮಾತ್ಮನ ಸ್ಮರಣೆಯಲ್ಲಿ ನಿಮ್ಮ ಕರುಣೆಯ ಶಿಶು ನಾನು ಎಂದು ಜಗನ್ಮಾತಾ ಅಕ್ಕಮಹಾದೇವಿ ತಮ್ಮ ಸಾಧನೆಯ ಪರಿಪೂರ್ಣತೆಗೆ ಬಸವಾದಿ ಪ್ರಮಥರ ಕರುಣೆಯೇ ಕಾರಣವಾಗಿದೆ ಎಂಬುದನ್ನು ಕೃತಜ್ಞತಾ ಭಾವದಿಂದ ಸ್ಮರಿಸಿದ್ದಾರೆ.

372. ಅರಿವು–ಆಚಾರ

ಅಕ್ಕಿಯಿಲ್ಲದ ತುಷಕ್ಕೆ ಅಗ್ಘವಣಿಯ ನೆರೆದಡೆ
ಅದೆಂದಿಗೆ ಬೆಳೆದು ಫಲವಪ್ಪುದಯ್ಯ
ಅರಿವಿಲ್ಲದವರಿಗೆ ಆಚಾರವಿದ್ದಡೆ
ಅರಕೆಗೆಟ್ಟು ಸುಖವೆಂದಪ್ಪುದಯ್ಯ?
ಹೊರೆದ ಪರಿಮಳ ಸ್ಥಿರಗಾಗಬಲ್ಲುದೆ?
ಎನ್ನ ದೇವ ಚನ್ನಮಲ್ಲಿಕಾರ್ಜುನ ದೇವರನರಿಯದವರಿಗೆ
ಆಚಾರವಿಲ್ಲ ಕಾಣಿರಣ್ಣಾ !

ಭಾವಾರ್ಥ– ಇಲ್ಲಿ ಅಕ್ಕಮಹಾದೇವಿಯವರು ಜಗತ್ತಿಗೆ ಅಮೂಲ್ಯವಾದ ಸಂದೇಶವನ್ನು ಕೊಟ್ಟಿದ್ದಾರೆ. ಕೆಲವು ಉಪಮೆಗಳ ಮೂಲಕ ಆಚಾರ ಮತ್ತು ಅರಿವಿನ ಮಹತ್ವವನ್ನು ತಿಳಿಸಿದ್ದಾರೆ. ಭತ್ತದ ಒಳಗಿನ ತಿರುಳಾದ ಅಕ್ಕಿ ಇಲ್ಲದೆ ಬರಿ ಭತ್ತದ ಹೊಟ್ಟು(ಸಿಪ್ಪೆ)ನ್ನು ಬಿತ್ತಿ, ನೀರು, ಗೊಬ್ಬರ ಹಾಕಿ ಪೋಷಿಸಿದರೆ ಅದು ಎಂದಾದರೂ ಬೆಳೆದು ಫಲ ಕೊಡಲು ಸಾಧ್ಯವೇ? ಇಲ್ಲ. ಏಕೆಂದರೆ ಒಳಹೊರಗೆ ಭತ್ತದ ಬಿತ್ತನೆ ಬೀಜ ಸತ್ವಯುತವಾಗಿದ್ದರೆ ಮಾತ್ರ ನೀರು ಗೊಬ್ಬರ ಉಂಡು ಫಲ ಕೊಡುತ್ತದೆ. ಮೇಲೆ ಹೇಳಿದಂತೆ ಬರಿ ಹೊರಗಿನ

ಭತ್ತದ ಹೊಟ್ಟಿಗೆ ನೀರು ಗೊಬ್ಬರ ಹಾಕಿದರೆ ಅದು ವ್ಯರ್ಥ ಪರಿಶ್ರಮವಲ್ಲದೆ ಬೇರಲ್ಲ. ತಿಳುವಳಿಕೆ ಅಥವ ಅರಿವು, ಜ್ಞಾನ ಇಲ್ಲದೆ ಕೇವಲ ಆಚಾರವನ್ನು ಮಾತ್ರ ಅಳವಡಿಸಿಕೊಂಡು ಆಚಾರವಂತನಾದರೆ ಅದು ಎಂದಿಗೂ ಶಾಶ್ವತ ಪರಿಣಾಮ ಬೀರುವುದಿಲ್ಲ. ಬೆವರಿನ ವಾಸನೆಯಿಂದ ಕೂಡಿದ ಶರೀರಕ್ಕೆ ಸುವಾಸಿತ ದ್ರವ್ಯ ಸಿಂಪಡಿಸಿದರೆ ಅದು ಕ್ಷಣಿಕ ಪರಿಹಾರ ಮಾತ್ರವಾಗುತ್ತದೆ. ಮತ್ತೆ ಶರೀರವು ಬೆವರು ವಾಸನೆಯಿಂದ ಕೂಡುತ್ತದೆ. ಅದೇ ರೀತಿ ಅರಿವಿಲ್ಲದ ಆಚಾರದ ಪರಿಣಾಮವು ಸಹ ಕೆಟ್ಟು ಹೋದ ಗಡಿಯಾರ ದಿನಕ್ಕೆ ಎರಡು ಬಾರಿ ಮಾತ್ರ ಸರಿಯಾದ ಸಮಯ ತೋರಿದಂತೆ ಕ್ಷಣಿಕ ಸತ್ಯವಾಗಿದೆ. ಆದ್ದರಿಂದ ಸರ್ವಶಕ್ತ, ಹುಟ್ಟು–ಸಾವಿಲ್ಲದ, ನಿರಾಕಾರ, ನಿರ್ಗುಣನಾದ ಪರಮಾತ್ಮನ ಅಸ್ತಿತ್ವ ಮತ್ತು ಸ್ವರೂಪವನ್ನು ಅರಿತು, ಲಿಂಗದೀಕ್ಷೆ ಪಡೆದು, ಸದಾಚಾರ ಸಂಪನ್ನನಾದಾಗ ಮಾತ್ರ ಆ ಭಕ್ತನ ಆಚಾರಕ್ಕೆ ಫಲ ಸಿಗುತ್ತದೆ. ಲಿಂಗಾಯತ ಧರ್ಮದಲ್ಲಿ ದೇವನ ನಿಜವಾದ ಅರಿವನ್ನು ಅಳವಡಿಸಿಕೊಳ್ಳದ ಭಕ್ತನು ಮಾಡುವ ಅನ್ಯ ದೇವತೆಗಳ ಪೂಜೆ, ವ್ರತ, ನಿಯಮ, ಆಚರಣೆಗಳು ಧರ್ಮಸಮ್ಮತವಲ್ಲ ಎಂದು ಅಕ್ಕಮಹಾದೇವಿಯವರು ನಿರ್ದೇಶಿಸಿದ್ದಾರೆ.

(ಮುಂದುವರಿಯುವುದು...)

ಉಳವಿಯ ಬಸವ ಮಹಾಮನೆಯಲ್ಲಿ
ಸಾಮೂಹಿಕ ಇಷ್ಟಲಿಂಗಾರ್ಚನೆ

ಶರಣ ಬಂಧುಗಳೇ,

ಉಳವಿಯ ಸುಕ್ಷೇತ್ರದಲ್ಲಿ ಬಸವ ಧರ್ಮ ಪೀಠದಿಂದ ಒಂದು ಜಾಗವನ್ನು ಖರೀದಿಸಲಾಗಿದೆ. ಶ್ರೀ ಚನ್ನಬಸವೇಶ್ವರ ದೇವಾಲಯದಿಂದ ಸುಮಾರು ಒಂದೂವರೆ ಕಿಲೋಮೀಟರ್ ದೂರದಲ್ಲಿ ಹರಳಯ್ಯನ ಚಿಲುಮೆ ಪ್ರದೇಶದ ಎದುರಿಗೆ ರಸ್ತೆಗೆ ಅಂಟಿಕೊಂಡು ಈ ಜಾಗವಿದೆ. ಇಲ್ಲಿ ಶಿವರಾತ್ರಿಯ ದಿನ ಗಣಮೇಳವನ್ನು 2017ರ ಫೆಬ್ರವರಿ 24ರಂದು ಶುಕ್ರ(ಮಾತೃ)ವಾರದಂದು ಸಾಮೂಹಿಕ ಇಷ್ಟಲಿಂಗಪೂಜೆಯನ್ನು ಪೂಜ್ಯ ಶ್ರೀಮನ್ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಏರ್ಪಡಿಸಲಾಗಿದೆ. ಬೆಳಿಗ್ಗೆ 11 ಗಂಟೆಯಿಂದ ಪೂಜಾ ಕಾರ್ಯಕ್ರಮ ನೆರವೇರಲಿದೆ. ನಮ್ಮ ಜಾಗದ ತನಕ ವಾಹನಗಳು ಕೂಡಾ ಸಾಗುತ್ತವೆ. ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಸೂಚಿಸುತ್ತೇವೆ. ದಾಸೋಹಕ್ಕೆ ಕಾಣಿಕೆ ನೀಡುವವರಿಗೆ ಅವಕಾಶವಿರುತ್ತದೆ. ತನು ಮನ ಧನದಿಂದ ಸಹಕರಿಸಬೇಕೆಂದು ಕೋರುತ್ತೇವೆ.

ವಿ.ಸೂ: ಉಳವಿಯ ಶ್ರೀ ಚನ್ನಬಸವೇಶ್ವರ ದೇವಸ್ಥಾನದಲ್ಲಿ ವಸತಿ ಸೌಲಭ್ಯವಿದ್ದು, ಮುಂಗಡವಾಗಿ ಬುಕ್ಕಿಂಗ್ ಮಾಡಿಕೊಳ್ಳುವವರು ರೂಂಗಳನ್ನು ಬುಕ್ ಮಾಡಿಕೊಳ್ಳಬೇಕಾಗಿ ವಿನಂತಿ.

– ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ
ಪೀಠಾಧ್ಯಕ್ಷರು, ಚನ್ನಬಸವೇಶ್ವರ ಜ್ಞಾನಪೀಠ
ಕಲ್ಯಾಣ ಕಾಣಸುಕ್ಷೇತ್ರ ಉಳವಿ

ಸ್ವತಂತ್ರ ಲಿಂಗಾಯತ ಧರ್ಮದ ಲಕ್ಷಣಗಳು

– ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮಿಗಳು

1. ಧರ್ಮಗುರು – ವಿಶ್ವಗುರು ಬಸವಣ್ಣನವರು.

ಶಿವಗುರುವೆಂದು ಬಲ್ಲಾತನೆ ಗುರು, ಶಿವಲಿಂಗವೆಂದು ಬಲ್ಲಾತನೆ ಗುರು,
ಶಿವ ಜಂಗಮವೆಂದು ಬಲ್ಲಾತನೆ ಗುರು, ಶಿವ ಪ್ರಸಾದವೆಂದು ಬಲ್ಲಾತನೆ ಗುರು,
ಶಿವ ಆಚಾರವೆಂದು ಬಲ್ಲಾತನೆ ಗುರು, ಇಂತೀ ಪಂಚವಿಧವೆ ಪಂಚ
ಬ್ರಹ್ಮವೆಂದರಿಂದ ಮಹಾಮಹಿಮ ಸಂಗನ ಬಸವಣ್ಣನು ಎನಗೆಯೂ ಗುರು, ನಿನಗೆಯೂ ಗುರು, ಜಗವೆಲ್ಲಕ್ಕೆಯೂ ಗುರು ಕಾಣಾ ಗುಹೇಶ್ವರಾ. ವ್ಯೋಮಕಾಯಸಿದ್ಧ ಅಲ್ಲಮ ಪ್ರಭುದೇವರು ಆದಿಯಲ್ಲಿ ನೀನೇ ಗುರುವಾದ ಕಾರಣ ನಿನ್ನಿಂದ ಹುಟ್ಟಿತು ಲಿಂಗ, ಆದಿಯಲ್ಲಿ ನೀನೇ ಲಿಂಗವಾದ ಕಾರಣ ನಿನ್ನಿಂದ ಹುಟ್ಟಿತು ಜಂಗಮ.

ಯಾರು ಧರ್ಮವನ್ನು ಸ್ಥಾಪನೆ ಮಾಡುತ್ತಾರೆಯೋ ಅವರ ಹೆಸರು ಮಂತ್ರವಾಗುತ್ತದೆ. ಶಿವ ಶೈವ ಧರ್ಮವನ್ನು ಸ್ಥಾಪನೆ ಮಾಡಿದ ಕಾರಣ ಅವನ ಹೆಸರು "ಓಂ ನಮಃ ಶಿವಾಯ" ಎಂಬ ಮಂತ್ರವಾಯಿತು. ಕಾರಣ ಶ್ರೀ ಗುರು ಬಸವಣ್ಣನವರು ಲಿಂಗಾಯತ ಧರ್ಮವನ್ನು 1155 ಜನವರಿ 14 ರಂದು ಸ್ಥಾಪನೆ ಮಾಡಿದ ಕಾರಣ ಅವರ ಹೆಸರು "ಓಂ ಶ್ರೀ ಗುರು ಬಸವ ಲಿಂಗಾಯ ನಮಃ" ಎಂಬುದು ಮಂತ್ರವಾಯಿತು. ವಿಶ್ವಾತ್ಮ ಕುರುಹಾದ ಇಷ್ಟಲಿಂಗವೆಂಬ ಅದ್ಭುತ ಪರಿಕಲ್ಪನೆಯ ವೈಜ್ಞಾನಿಕ, ವೈಚಾರಿಕ ಪರಿಕಲ್ಪನೆಯ ಸಾಧನ ವನ್ನು ಕೊಟ್ಟರು. ಗುರು ಬಸವಣ್ಣನವರು ಹೊಸದೊಂದು ಲಿಂಗಾಯತ ಧರ್ಮವನ್ನು ಹುಟ್ಟು ಹಾಕಿದ್ದರಿಂದ ಅವರು ಈ ಲಿಂಗಾಯತ ಧರ್ಮಕ್ಕೆ ಧರ್ಮ ಗುರುವಾಗಿದ್ದಾರೆ. ಅವರ ಜೀವಿತಾವಧಿ 62ವರ್ಷ 3ತಿಂಗಳು 1134 ರಿಂದ 1196.

2. ಧರ್ಮಸಂಹಿತೆ:– ಸಮಾನತೆ ಸಾರುವ ವಚನ ಸಾಹಿತ್ಯ. ಗುರು ಬಸವಣ್ಣನವರು ಅವತರಿಸಿ ಬರುವ ಪೂರ್ವದಲ್ಲಿ ಸಂಸ್ಕೃತ, ಹಳೆಗನ್ನಡ ಇತ್ತು. ಸಂಸ್ಕೃತದಲ್ಲಿ ಮಂತ್ರ ಹೇಳಿದರೆ ಮಾತ್ರ ದೇವರು ಒಲಿಯುತ್ತಾನೆ ಅಂತಾ ಹೇಳುತ್ತಿದ್ದರು. ಆದರೆ ಗುರು ಬಸವಣ್ಣನವರು ಸುಂದರ ಸರಳ ಜನಪದ ಆಡು ಭಾಷೆಯಾದ ಕನ್ನಡದಲ್ಲಿ ವಚನಗಳನ್ನು ತಿಳಿಸಿ ಹೇಳಿದ್ದರಿಂದ ದೇವರನ್ನು ಒಲಿಸಿಕೊಂಡರು. ತಾವು ದೇವರನ್ನು ಸಾಕ್ಷಾತ್ಕರಿಸಿಕೊಂಡು 770 ಜನ ಅಮರಗಣಂಗಳನ್ನು ದಾರ್ಶನಿಕರನ್ನು ತಯಾರು ಮಾಡಿದರು. ಇಂಥವರಲ್ಲಿ 60 ಜನ ಮಹಿಳೆಯರು ವಚನ ಸಾಹಿತ್ಯವನ್ನು ಅನುಭಾವ ಸಾಹಿತ್ಯವನ್ನು ಜಗತ್ತಿಗೆ ಕೊಡಮಾಡಿದ್ದಾರೆ. ವಚನಗಳನ್ನು ಅಂದರೆ ಸತ್ಯದ ತುಕುಡಿಗಳು. ಆಚರಿಸಿ ಅನುಭವಿಸಿ ಹೃದಯಾಂತರಾಳದಿಂದ ಹೊರಹೊಮ್ಮಿದ ನುಡಿ ಮುತ್ತುಗಳು. "ಕೆರೆ ಹಳ್ಳ ಭಾವಿಗಳು ಮೈದೆಗೆದರೆ, ಗುಳ್ಳೆ ಗೊರಚೆ ಚಿಪ್ಪುಗಳು ಕಾಣಬಹುದು, ವಾರಧಿ ಮೈದೆಗೆದರೆ ಮುತ್ತು ರತ್ನಂಗಳ ಕಾಣಬಹುದು, ಲಿಂಗದೇವನ ಶರಣರು ಮನದೆರೆದು ಮಾತನಾಡಿದರೆ ಲಿಂಗವೇ ಕಾಣಬಹುದು" ಎಂದು ಗುರು ಬಸವಣ್ಣನವರು ಅರುಹಿದ್ದಾರೆ.

ಸಾಮಾಜಿಕವಾಗಿ , ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ವೈಜ್ಞಾನಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ನೈತಿಕವಾಗಿ, ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ಎಲ್ಲ ವಿಷಯಗಳನ್ನೊಳಗೊಂಡು ಸಾದರಪಡಿಸುವ ಸರಳ ಅಚ್ಚ ಕನ್ನಡದಲ್ಲಿ (ಪುಟ 21ರಲ್ಲಿ ಮುಂದುವರಿದಿದೆ.)



ಸನ್ಮಾನ್ಯ ಶ್ರೀ ಹೆಚ್.ಕೆ. ಪಾಟೀಲ್ ರವರಿಗೆ ಸನ್ಮಾನ



ಸನ್ಮಾನ್ಯ ಶ್ರೀ ಶರಣಪ್ರಕಾಶ ಪಾಟೀಲರವರಿಗೆ ಸನ್ಮಾನ





ಸನ್ಮಾನ್ಯ ಶ್ರೀ ಸಿ.ಟಿ. ರವಿಯವರಿಗೆ ಸನ್ಮಾನ



ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಶರಣರಿಗೆ
ಪೂಜ್ಯ ಮಾತಾಜಿಯವರಿಂದ ಪ್ರಶಸ್ತಿ ಪ್ರದಾನ



ಮಹಾಮನೆಯ ಆವರಣದಲ್ಲಿ ಸೇರಿರುವ ಶರಣ ಸಮೂಹ

30ನೇ ಶರಣ ಮೇಳದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಚಿತ್ರಣ

















ಜನವರಿ-ಫೆಬ್ರವರಿ-2017















ಜನವರಿ-ಫೆಬ್ರವರಿ-2017













(ಪುಟ – 12ರಿಂದ ಮುಂದುವರಿದ ಭಾಗ)

ಹೊರಹೊಮ್ಮಿದ ಸಾಹಿತ್ಯವೇ ವಚನ ಸಾಹಿತ್ಯ. ಇದು ವಿಶ್ವಸಾಹಿತ್ಯ. ಸಾರ್ವಕಾಲಿಕ ಸತ್ಯವನ್ನು ಪ್ರತಿಪಾದಿಸುವಂಥ ಅಮೂಲ್ಯ ಸಾಹಿತ್ಯ. "ಉಪನಿಷತ್ತಿಲ್ಲಿರುವುದೆಲ್ಲ ವಚನ ಸಾಹಿತ್ಯವಲ್ಲಿದೆ. ಆದರೆ ವಚನಸಾಹಿತ್ಯದಲ್ಲಿರುವುದು ಉಪನಿಷತ್‌ನಲ್ಲಿಲ್ಲ. ಅಂತಾ ಅ.ನ.ಕೃಷ್ಣರಾಯರು ಬ್ರಾಹ್ಮಣ ಪಂಡಿತರು ಒಳ್ಳೇ ಅಭಿಮಾನದಿಂದ ಹೇಳುತ್ತಾರೆ. ಜಗತ್ತಿನ ದೊಡ್ಡ ಭಾಷೆಯಾದ ಇಂಗ್ಲೀಷ್‌ದಲ್ಲಿ ಹಾಗೂ ಫ್ರೆಂಚ್ ಭಾಷೆಯಲ್ಲಿರುವ ಅನುಭಾವ ಸಾಹಿತ್ಯದ ಹತ್ತು ಪಟ್ಟು ವಚನ ಸಾಹಿತ್ಯದಲ್ಲಿದೆ ಎಂದು ರಂಗನಾಥ ದಿವಾಕರರವರು ಹೃದಯ ತುಂಬಿ ಹೇಳುತ್ತಾರೆ. ಶ್ರೀ ವಿ.ಕೃ. ಗೋಕಾಕ್‌ರವರನ್ನು ಒಬ್ಬ ಮಹಾನುಭಾವರು ಪ್ರಶ್ನಿಸುತ್ತಾರೆ, ಜಗತ್ತಿಗೆ ಕನ್ನಡದ ಕೊಡುಗೆ ಏನು? ಅಂತಾ. ಆಗ ಅವರು ಹೇಳುತ್ತಾರೆ. "ವಚನ ಸಾಹಿತ್ಯ" ಅಂತಾ. 1924 ರಲ್ಲಿ ಬೆಳಗಾವಿಯ ಕಾಂಗ್ರೆಸ್ ಅಧಿವೇಶನದಲ್ಲಿ ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು (ಕರ್ನಾಟಕದವರಾದ ನೀವುಗಳು) ಗುರು ಬಸವೇಶ್ವರರು ಕೊಟ್ಟ ವಚನ ಸಾಹಿತ್ಯದ ಮೂಲಕ ತತ್ವ ಸಿದ್ಧಾಂತಗಳನ್ನು ಆಚರಿಸಿ ಅನುಷ್ಠಾನಿಸಿ ಪ್ರಚಾರ ಮಾಡಿದರೆ ಕರ್ನಾಟಕವಲ್ಲ, ಮಹಾರಾಷ್ಟ್ರವಲ್ಲ ಭಾರತವಲ್ಲ ಇಡೀ ಜಗತ್ತನ್ನೆ ಉದ್ಧಾರಮಾಡ ಬಲ್ಲಿರಿ ಅಂತಾ ಭವಿಷ್ಯ ವಾಣಿಯನ್ನು ನುಡಿದಿದ್ದಾರೆ.

3.ಧರ್ಮಭಾಷೆ:- ಜೈನ, ಬೌದ್ಧ, ಶಿಖ್, ಕ್ರಿಶ್ಚಿಯನ್, ಇಸ್ಲಾಂ, ಹಿಂದುಗಳಿಗೆ ಪ್ರತೇಕ ಧರ್ಮಭಾಷೆ ಇರುವಂತೆ ಲಿಂಗಾಯತ ಧರ್ಮದ ಭಾಷೆ ಕನ್ನಡ. ಗುರು ಬಸವಣ್ಣನವರು ಜನಪದ ಭಾಷೆಯಾದ ಅಚ್ಚ ಕನ್ನಡದಲ್ಲಿ ವಚನಗಳನ್ನು ರಚಿಸಿದರು. ತಾವು ರಚಿಸುವವರೊಂದಿಗೆ ಸಾವಿರಾರು ಶರಣರಿಗೆ ಅಕ್ಷರ ದಾಸೋಹವನ್ನು ಏರ್ಪಡಿಸಿ ಜನ ಸಾಮಾನ್ಯರು ಸಹ ಅಕ್ಷರ ಕಲಿತು ವಚನಗಳನ್ನು ರಚಿಸಿ ದಾರ್ಶನಿಕರಾದರು. ಅದಕ್ಕೂ ಮೊದಲು ಸಂಸ್ಕೃತ ಮಂತ್ರ ಹೇಳಿದರೆ ಮಾತ್ರ ದೇವರು ಒಲಿಯುತ್ತಾನೆ ಅಂತಾ ಇತ್ತು. ಆದರೆ ಬಸವಾದಿ ಪ್ರಮಥರು ದೇವರಿಗೆ ಕನ್ನಡವನ್ನು ಕಲಿಸುವುದರ ಜೊತೆಗೆ ದೇವಸಾಕ್ಷಾತ್ಕಾರವನ್ನು ಮಾಡಿಕೊಂಡರು. "ಹಾಲ ತೊರೆಗೆ ಬೆಲ್ಲದ ಕೆಸರು ಸಕ್ಕರೆಯಂಥ ಮಳಲು, ತವರಾಜದಂತಹ ನೊರೆ ತೊರೆಯಂತೆ ಆದ್ಯರ ವಚನವಿರಲು, ಬೇರೆ ಬಾವಿಯ ತೋಡಿ ಉಪ್ಪು ನೀರನುಂಬುವವನ ಮತಿ ಲಿಂಗದೇವಾ ಎಂದು ಕನ್ನಡ ಭಾಷೆಯ ಮಹಿಮೆಯನ್ನು ಮೆರೆದಿದ್ದಾರೆ. ಜಗತ್ತಿನಲ್ಲಿಯೇ ಅತೀ ಸುಂದರವಾದ ಸಾಹಿತ್ಯವಾದ ಎಲ್ಲ ವಿಧದಿಂದಲೂ ಪರಿಪೂರ್ಣತೆಯನ್ನು ಹೊಂದಿದೆ. ಈ ಕನ್ನಡ ಭಾಷೆ ಧರ್ಮ ಭಾಷೆಯಾಗಿದೆ.

4. ಧರ್ಮದ ದೇವರ ಹೆಸರು:- ದೇವನೊಬ್ಬ ನಾಮಹಲವು ಅನ್ನುವ ಉಕ್ತಿಯಂತೆ ಅಲ್ಲಹಾ, ಯಹೋವಾ, ಸುಪ್ರಿಂ ಗಾಡ್ ಎಂದು ಆಯಾ ಧರ್ಮದವರು ನಿರಾಕಾರ ನಿರಂಜನ, ನಿರವಯವನಾದ ದೇವನನ್ನು ಭಕ್ತಿಯಿಂದ ಹೆಸರಿಟ್ಟು ಕರೆದರು. ಅದರಂತೆ ಗುರು ಬಸವಣ್ಣನವರು ಉತ್ಪತ್ತಿ, ಸ್ಥಿತಿ, ಲಯಗಳಿಗೆ ಕಾರಣೀಕರ್ತನಾದ ಬ್ರಹ್ಮ, ವಿಷ್ಣು, ಮಹೇಶ್ವರರೆಂದು ಕಲ್ಪನೆಯನ್ನು ಮೀರಿದ ದೇವನಿಗೆ 'ಲಿಂಗದೇವಾ' ಎಂದು ಹೆಸರಿಟ್ಟು ಕರೆದರು. ಇಷ್ಟಲಿಂಗವೆಂಬ ಅದ್ಭುತ ಪರಿಕಲ್ಪನೆಯುಳ್ಳ ಕುರುಹನ್ನು ಪೂಜೆಗೈಯಲು ಸಂಶೋಧಿಸಿ ಕೊಟ್ಟು 'ಲಿಂಗದೇವ' ನನ್ನು ಸಾಕ್ಷಾತ್ಕರಿಸಿಕೊಂಡರು. ಕಾರಣ ಧರ್ಮದ ದೇವರ ಹೆಸರು 'ಲಿಂಗದೇವ'.

5.ಧರ್ಮಲಾಂಛನ:- ಸೃಷ್ಟಿಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗ. ದೇವರು ನಿರಾಕಾರ, ನಿರಂಜನ, ನಿರವಯವ, ಪರಂಜ್ಯೋತಿ ಸ್ವರೂಪ. ಅವನನ್ನು ಅರಿಯಲು ಮತ್ತು

ಸಾಕ್ಷಾತ್ಕಾರ ಮಾಡಿಕೊಳ್ಳಲು ಸಾಕಾರದ ಅವಶ್ಯಕತೆಯನ್ನು ಮನಗಂಡು ಗುರು ಬಸವಣ್ಣನವರು ಇಷ್ಟಲಿಂಗವೆಂಬ ಅದ್ಭುತ ಕುರುಹನ್ನು ಕರುಣಿಸಿದ್ದಾರೆ. ಇದು ಕಪ್ಪಾಗಿ ಹೊಳಪುಳ್ಳದ್ದಾಗಿ ಕಾಂತಿಯುಕ್ತವಾಗಿದೆ.

ಭೂಮಿ, ನೀರು, ಗಾಳಿ, ಬೆಂಕಿ, ಆಕಾಶ ಈ ಪಂಚಭೂತಗಳು ಗೋಲಾಕಾರವಾಗಿವೆ ಬ್ರಹ್ಮಾಂಡವು ಗೋಲಾಕಾರವಾಗಿದೆ. ಲಿಂಗದೇವನು (ಪರಮಾತ್ಮನು) ನಿರಾಕಾರ. ಅವನ ದೇಹವು ಸಾಕಾರ ಬ್ರಹ್ಮಾಂಡ. ಇದರ ಸಾಂಕೇತಿಕವಾಗಿ ಹೊರಗಡೆ ಕೆಲವು ಪೂರಕವಾದ ವಸ್ತುಗಳನ್ನು ಸೇರಿಸಿ ಕಾಂತಿಯುಕ್ತವಾದ ಗೋಲಾಕಾರ ಲಿಂಗವನ್ನು (ತತ್ತಿಯ ಆಕಾರ) ತಯಾರಿಸಿದ್ದಾರೆ. ಒಳಗಡೆ ಒಂದು ಪಂಚಸೂತ್ರ ಲಿಂಗವನ್ನು (ಸೆಲ್ಲಿಕಲ್ಲಿನಿಂದ ತಯಾರಿಸಿದ) ಜೀವಾತ್ಮನ ಸಂಕೇತವಾಗಿ ಇಟ್ಟಿದ್ದಾರೆ. (ಇಷ್ಟಲಿಂಗ ಪೂಜೆಗೆ ಕುಳಿತ ಪೋಜನ್ನು ನೋಡಿದಾಗ ನಡದಿಂದ ತಲೆಯವರೆಗೆ ಗೋಳಕ, ನಡದಿಂದ ಕೆಳಗಡೆ ಪೀಠ, ಕೈಯಲ್ಲಿ ಲಿಂಗ ಹಿಡಿದಿದ್ದು ಜಲಹರಿ) ಇದರ ಅರ್ಥವೇನೆಂದರೆ, ಜೀವಾತ್ಮನು (ಅಂಗ) ಪರಮಾತ್ಮನು (ಲಿಂಗ) ಇಬ್ಬರೂ ಒಂದೇ ಅಂತಾ ಪೂಜೆ ಮಾಡುವಂತಹದ್ದು. ಜೀವಾತ್ಮ-ಪರಮಾತ್ಮರ (ಅಂಗ-ಲಿಂಗದ) ಸಾಮರಸ್ಯವೇ ಇದರ ಗುರಿ. ಇಷ್ಟಲಿಂಗವನ್ನು ಯಾವುದೇ ಜಾತಿ, ಮತ, ಪಂಥ, ವರ್ಣ, ಸ್ತ್ರೀ-ಪುರುಷರೆಂಬ ಭೇದ-ಭಾವವಿಲ್ಲದೆ ಧರಿಸಿಕೊಳ್ಳಬಹುದು. ಸರಳವಾಗಿ, ಸಂಕ್ಷಿಪ್ತವಾಗಿ ಪೂಜೆ, ಧ್ಯಾನ, ಯೋಗ ಮಾಡಿ ಸಾಕ್ಷಾತ್ಕಾರ ಮಾಡಿಕೊಂಡು ಮಾನವ ಜೀವನದ ಆತ್ಯಂತಿಕ ಗುರಿಯನ್ನು ಸಾಧಿಸಬಹುದು. ಮನೋವಿಜ್ಞಾನಿಗಳಾದಂಥಹ ಗುರು ಬಸವಣ್ಣನವರು ತಾಯಿಯ ಗರ್ಭದಲ್ಲಿ ಇರುವಾಗ, ಬೆಳೆಯುತ್ತಿರುವಾಗ ಧಾರ್ಮಿಕ ಸಂಸ್ಕಾರ ಮಗುವಿಗೆ ದೊರೆಯಲಿ ಅಂತಾ ಸದುದ್ದೇಶದಿಂದ 8ನೇ ತಿಂಗಳಿಗೆ ಗರ್ಭಲಿಂಗ ಧಾರಣೆ ಮಾಡುವ ಪದ್ಧತಿಯನ್ನು 12ನೇ ಶತಮಾನದಲ್ಲಿಯೇ ಬಳಕಗೆ ತಂದಿದ್ದರು. ಈ ಪ್ರಯೋಗವನ್ನು ಮೊದಲು ಇಷ್ಟಲಿಂಗ ಜನಕರಾದ ಗುರು ಬಸವಣ್ಣನವರು ತಾವು ಪ್ರಥಮವಾಗಿ ಧರಿಸಿಕೊಂಡು 2ನೇದಾಗಿ ಶೂದ್ರತ್ವದ ಪಟ್ಟವನ್ನು ಕಟ್ಟಿದ ಸ್ತ್ರೀ ಕುಲದ ಪ್ರತೀಕವಾಗಿ ಅಕ್ಕನಾಗಲಾಂಬಿಕೆಗೆ ವಿಭೂತಿ ಧರಿಸಿ ಗರ್ಭಲಿಂಗ ಧಾರಣೆ ಮಾಡಿದರು. ಇದರ ಪ್ರತಿಫಲವಾಗಿ ಮಹಾಜ್ಞಾನಿಯಾದ ಚನ್ನಬಸವಣ್ಣನವರ ಜನನವಾಯಿತು. 8ನೇ ತಿಂಗಳಿಗೆ ಸಿಕ್ಕಂತಹ ಇಷ್ಟಲಿಂಗ ಸಂಸ್ಕಾರ ಮನುಷ್ಯನು ಇಹಲೋಕವನ್ನು ತ್ಯಜಿಸುವ ತನಕ ಜೊತೆಗೆ ಇರುವುದು. ಇದು ಅಂದರೆ ಇಷ್ಟಲಿಂಗ ಮೊಬೈಲ್ ಗಾಡ್, ಸೆಕ್ಯುರಿಟಿ ಗಾಡ್, ಪರ್ಸನಲ್ ಗಾಡ್ ದಂತೆ ಕಾರ್ಯ ನಿರ್ವಹಿಸುತ್ತದೆ.

"ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದಡೆ
ತಪ್ಪುವುವು ಅಪಮೃತ್ಯು ಕಾಲಕರ್ಮಂಗಳಯ್ಯಾ,
ದೇವ ಪೂಜೆಯ ಮಾಟ ದುರಿತ ಬಂಧನದೋಟ,
ಶಂಬು ನಿಮ್ಮಯ ನೋಟ ಹೆರಹಿಂಗದಾ ಕಣ್ಬೇಟ
ಸದಾ ಸನ್ನಿಹಿತನಾಗಿ ಶರಣೆಂಬುವುದು ನಂಬುವುದು
ಜಂಗಮಾರ್ಚನೆಯ ಮಾಟ ಲಿಂಗದೇವನ ಕೂಡುವ ಕೂಟ.

ಎಂಬುದು ಗುರು ಬಸವಣ್ಣನವರ ವಾಣಿಯು.

ಪೂಜೆಗೆ 33 ಮಾರ್ಕ್ಸ್, ಪ್ರಾರ್ಥನೆಗೆ 33 ಮಾರ್ಕ್ಸ್, ಧ್ಯಾನಕ್ಕೆ 33 ಮಾರ್ಕ್ಸ್, ಭಕ್ತಿ, ಶ್ರದ್ಧೆ, ನಿಷ್ಠೆ, ಶರಣಾಗತಿಯಿಂದ ಮಾಡಿದಾಗ ಒಂದು ಗ್ರೇಸ್ ಮಾರ್ಕ್ಸ್, ಎಲ್ಲವೂ ಸೇರಿ 100ಕ್ಕೆ 100 ಮಾರ್ಕ್ಸ್‌ಗಳು ದೊರೆಯುತ್ತವೆ. ಇದೊಂದು ಅದ್ಭುತ ಕಲ್ಪನೆ.

ಸತಿಪತಿಗಳೊಂದಾದ ಭಕ್ತಿ

-ಮಾತೆ ಕಸ್ತೂರಿದೇವಿ

ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ,
ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ,
ಇದ್ದಡೇನೊ ಶಿವ ಶಿವಾ ಹೋದಡೇನೊ?
ಲಿಂಗದೇವಯ್ಯಾ, ಹಡೆದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ.

– ಗುರು ಬಸವಣ್ಣನವರು.

ಅದೊಂದು ಹೆಸರಾಂತ ಉದ್ಯಮ. ತನ್ನ ಅತ್ಯುತ್ತಮ ಗುಣಮಟ್ಟದ ಉತ್ಪನ್ನಗಳಿಂದ ದೇಶವಿದೇಶಗಳಲ್ಲಿ ಸಾಕಷ್ಟು ಹೆಸರು ಮಾಡಿತ್ತು. ಇದರಿಂದ ಆ ಕಂಪನಿಯ ಉತ್ಪನ್ನಗಳಿಗೆ ವಿಶ್ವ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯಿತ್ತು. ಆದರೆ ಇತ್ತೀಚೆಗೆ ತಯಾರಾಗುತ್ತಿದ್ದ ಉತ್ಪನ್ನಗಳು ತಮ್ಮ ಗುಣಮಟ್ಟವನ್ನು ಕಳೆದುಕೊಂಡು ಕಂಪನಿಗೆ ನಷ್ಟವಾಗಲಾರಂಭಿಸಿತು. ಇದರಿಂದ ಎಚ್ಚೆತ್ತುಕೊಂಡ ಕಂಪನಿಯ ಆಡಳಿತ ವರ್ಗ ನಷ್ಟಕ್ಕೆ ಕಾರಣ ಹುಡುಕಲು ಅಧ್ಯಯನ ತಂಡವನ್ನು ನೇಮಿಸಿತು. ಅಧ್ಯಯನ ಕೈಗೊಂಡಾಗ, ನಷ್ಟಕ್ಕೆ ಕಾರಣಗಳು ಕಂಡು ಬಂದಿದ್ದು ಹೀಗೆ- ಕಂಪನಿ ಲಾಭದಲ್ಲಿದ್ದಾಗ ಕಾರ್ಮಿಕರಲ್ಲಿ ಶೇಕಡ 75 ರಷ್ಟು ಮಂದಿ ಅವಿವಾಹಿತರಾಗಿದ್ದು ಕೆಲಸದಲ್ಲಿ ನಿಷ್ಠೆ, ಏಕಾಗ್ರತೆ ಕಂಡು ಬರುತ್ತಿತ್ತು. ಆದರೆ ಇತ್ತೀಚೆಗೆ ಅವರಲ್ಲಿ ಬಹುಪಾಲು ಜನ ವಿವಾಹಿತರಾದ ಕಾರಣ ಮನೆಯಲ್ಲಿ ಪುರುಷ ಉದ್ಯೋಗಿಗಳು ತಮ್ಮ ಪತ್ನಿಯೊಂದಿಗೆ ಮತ್ತು ಮಹಿಳಾ ಉದ್ಯೋಗಿಗಳು ತಮ್ಮ ಪತಿಯೊಂದಿಗೆ ವಿನಾಕಾರಣ ವಿರಸ, ಅಸಹನೆ, ಜಗಳ, ಸಿಟ್ಟು, ಆತಂಕ, ದುರಾಸೆ, ಪರಸ್ಪರ ಸಂಶಯ, ಮನಸ್ತಾಪ ಮುಂತಾದ ಕ್ಷುಲ್ಲಕ ಘರ್ಷಣೆಗಳಲ್ಲಿ ತೊಡಗಿದ್ದು, ಇದರ ಪ್ರಭಾವದಿಂದ ಅನ್ಯಮನಸ್ಕತೆ ಮತ್ತು ನಿರಾಸಕ್ತಿಗಳಿಂದ ಕೆಲಸ ಮಾಡುತ್ತಿರುವುದು ನಷ್ಟಕ್ಕೆ ಪ್ರಮುಖ ಕಾರಣ ಎಂದು ವರದಿ ಮಾಡಿದರು. ಇದು ಕಂಪನಿಗೆ ದೊಡ್ಡ ತಲೆನೋವಾಯಿತು. ಆದರೂ ಎದೆಗೆಡದೆ ತಜ್ಞರ ಸಲಹೆಯಂತೆ ಕಾರ್ಮಿಕರಿಗೆ ಒಂದು ಆಪ್ತಸಮಾಲೋಚನ ಶಿಬಿರ ಮತ್ತು ಕಾರ್ಯಾಗಾರ(*work shop*)ವನ್ನು ಏರ್ಪಡಿಸಿತು. ಈ ಕಾರ್ಯಾಗಾರಕ್ಕೆ ಪ್ರತಿಯೊಬ್ಬ ಕಾರ್ಮಿಕನು ಕಡ್ಡಾಯವಾಗಿ ತನ್ನ ಜೀವನ ಸಂಗಾತಿಯೊಂದಿಗೆ ಹಾಜರಾಗ ಬೇಕೆಂದು, ತಪ್ಪಿದಲ್ಲಿ ಕೆಲಸ ಕಳೆದುಕೊಳ್ಳಲು ಸಿದ್ಧರಿರಬೇಕೆಂದು ಸೂಚನೆ ಕಳಿಸಿತು. ಈ ಕಾರ್ಯಾಗಾರದಲ್ಲಿ ದಂಪತಿಗಳ ಹೊಂದಾಣಿಕೆಗೆ ಬೇಕಾದ ಕೌಶಲ್ಯ, ತಾಳ್ಮೆ, ಸಣ್ಣಪುಟ್ಟ ವಿಷಯಗಳನ್ನು ಪರಸ್ಪರ ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳುವ ಬಗ್ಗೆ, ಸ್ವಪ್ರತಿಷ್ಠೆಯ ತ್ಯಾಗ, ಪಾರದರ್ಶಕತ್ವಗಳ ಬಗ್ಗೆ ಸಾಕಷ್ಟು ವಿಷಯಗಳನ್ನು ಪ್ರಾತ್ಯಕ್ಷಿಕೆ-ನಿದರ್ಶನ-ಸಂವಹನ-ಆಪ್ತಸಮಾಲೋಚನೆಗಳೊಂದಿಗೆ ಕಾರ್ಮಿಕ ದಂಪತಿಗಳಿಗೆ ಮನವರಿಕೆ ಮಾಡಿದರು. ಕೌಟುಂಬಿಕ ವ್ಯವಸ್ಥೆಯಲ್ಲಿ ಸಂಬಂಧಗಳನ್ನು ಕಾಪಾಡಿಕೊಳ್ಳುವಲ್ಲಿ ಎಡವಿದರೆ ವೈಯಕ್ತಿಕವಾಗಿ ಆಗುವ ಹಾನಿ, ಸಾಮಾಜಿಕ ಗೌರವಕ್ಕೆ ಧಕ್ಕೆ, ವೃತ್ತಿ ಜೀವನದಲ್ಲಿ ಆಗಲಿರುವ ದುಷ್ಪರಿಣಾಮಗಳ ಬಗ್ಗೆಯೂ ವಿವರಿಸಿದರು. ಹುಟ್ಟಲಿರುವ ತಮ್ಮ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಮತ್ತು ಸುಭದ್ರ ಜನಾಂಗ ನಿರ್ಮಾಣಕ್ಕಾಗಿ ಜೀವನದಲ್ಲಿ ತಂದೆತಾಯಿಯರ ಅನ್ಯೋನ್ಯತೆಯು ಬಹು ಮುಖ್ಯ ಪಾತ್ರ ವಹಿಸುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಟ್ಟರು. ಇದಾದ

ನಂತರ ಕಾರ್ಮಿಕರಲ್ಲಿ ಸಾಕಷ್ಟು ಬದಲಾವಣೆಯಾಗಿ ಗುಣಮಟ್ಟದ ಉತ್ಪನ್ನಗಳ ತಯಾರಿಕೆಯಲ್ಲಿ ಪ್ರಗತಿ ಕಂಡು ಬರಲಾರಂಭಿಸಿತು.

ಭಾರತೀಯ ಸಂಸ್ಕೃತಿಯ ಹಿಂದು ಪರಂಪರೆಯಲ್ಲಿ ನಾಲ್ಕು ಆಶ್ರಮಗಳನ್ನು ಉಲ್ಲೇಖಿಸಲಾಗಿದೆ. ಅವು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ ಎಂಬುದಾಗಿ. ಇವರಲ್ಲಿ ಉಳಿದ ಎಲ್ಲಾ ಆಶ್ರಮಗಳಿಗೂ ತಳಹದಿಯಾಗಿ ಗೃಹಸ್ಥಾಶ್ರಮವು ಕಾರ್ಯ ನಿರ್ವಹಿಸುತ್ತದೆ. ಆದ್ದರಿಂದ ಸ್ವಾಮಿ ವಿವೇಕಾನಂದರು 'ಸಂನ್ಯಾಸಾಶ್ರಮಕ್ಕೆ ಮೂಲ ಗೃಹಸ್ಥಾಶ್ರಮ' ಎಂದಿದ್ದಾರೆ. ಕೌಟುಂಬಿಕ ವ್ಯವಸ್ಥೆಯಲ್ಲಿ ಎರಡು ಕುಟುಂಬಗಳ ನಡುವಿನ ಸಾಮರಸ್ಯಕ್ಕೆ ಗಂಡಹೆಂಡತಿಯರ ಪಾತ್ರ ಬಹು ಮಹತ್ವದ್ದು. ಇಂಥ ದಂಪತಿಗಳು, ದೇಶ, ಧರ್ಮ, ಸಮಾಜಕ್ಕೆ ತಮ್ಮ ಕೊಡುಗೆಯನ್ನು ಕೊಡಲು ಅಗತ್ಯವಾದ ಹೊಂದಾಣಿಕೆಯಿಂದ, ನೈತಿಕ ಹೊಣೆಗಾರಿಕೆಯಿಂದ, ಪರಸ್ಪರ ಅರಿತುಕೊಂಡು ಬದುಕುವುದು ಅಷ್ಟೆ ಮಹತ್ವ ಪೂರ್ಣವಾದುದು. ಆದರೆ ಇತ್ತೀಚಿನ ದಂಪತಿಗಳಲ್ಲಿ ಹೊಂದಾಣಿಕೆ, ಅನ್ಯೋನ್ಯತೆ ಕ್ಷೀಣವಾಗುತ್ತಿದ್ದು, ಹಿಂದು ಸಮಾಜದಲ್ಲಿ ವಿವಾಹ ವಿಚ್ಛೇದನಗಳು ಹೆಚ್ಚಾಗುತ್ತಿವೆ. ಕಾರಣ ಹಲವು. ಹೆಣ್ಣು ಮಕ್ಕಳಿಗೆ ಶಿಕ್ಷಣವಿದ್ದರೂ ಸಂಸ್ಕಾರ ಇಲ್ಲದ್ದು ಪ್ರಮುಖ ಕಾರಣವಾದರೆ ಗಂಡು ಮಕ್ಕಳಿಗೆ ತಾಯಿತಂದೆಯರು ಸ್ತ್ರೀಯರನ್ನು ಗೌರವಿಸುವ ಸಂಸ್ಕಾರ ಕೊಡದೆ ವಿದ್ಯಾವಂತರನ್ನಾಗಿ ಮಾಡಿ, ಹಣ ಸಂಪಾದನೆಗೆ ಹೆಚ್ಚಿನ ಮಹತ್ವ ಕೊಡುತ್ತಿರುವುದು. ಇದರೊಂದಿಗೆ ಹಿರಿಯರ ಹಸ್ತಕ್ಷೇಪ. ಹೀಗಾಗಿ ಮದುವೆಯ ನಂತರದ ಸಂಸಾರದಲ್ಲಿ ನಿತ್ಯವೂ ಅಸಹನೆ, ಅಶಾಂತಿ, ವಿರಸ. ಇದರಿಂದ ಬದುಕಿನಲ್ಲಿ ಬಿರುಕು. ಭವಿಷ್ಯದಲ್ಲಿ ಕೂಡಿ ಬಾಳಲಾರದಷ್ಟು ಮನಸ್ತಾಪ. ಶ್ರೀಮಂತರು, ವಿದ್ಯಾವಂತರು, ಅನಕ್ಷರಸ್ಥರು, ಬಡಬಗ್ಗರು ಎಂಬ ಬೇಧವಿಲ್ಲದೆ ಎಲ್ಲರೂ ವಿವಾಹ ವಿಚ್ಛೇದನಕ್ಕೆ ಮುಂದಾಗಿರುವುದು ವಿಷಾದನೀಯ ವಾದರೂ ಸತ್ಯ ಎಂದು ಕೌಟುಂಬಿಕ ನ್ಯಾಯಾಲಯಗಳಲ್ಲಿ ಪ್ರತಿನಿತ್ಯ ದಾಖಲಾಗುತ್ತಿರುವ ಅಸಂಖ್ಯ ದಾವೆ (ಕೇಸು)ಗಳು ಹೇಳುತ್ತಿವೆ. ಈಗಂತೂ ಅವಿವಾಹಿತ ಮತ್ತು ಶಿಕ್ಷಿತ ಯುವಕ-ಯುವತಿಯರು ಪಾಶ್ಚಾತ್ಯ ಸಂಸ್ಕೃತಿಯಿಂದ ಪ್ರಭಾವಿತರಾಗಿ ವಿವಾಹವಾಗದೆ ಪತಿ ಪತ್ನಿಯರಂತೆ ಜತೆಯಲ್ಲಿ ವಾಸಿಸುವ, ಭಾರತೀಯ ಸಂಸ್ಕೃತಿಗೆ ವಿರುದ್ಧವಾದ ಜೀವನಶೈಲಿಗೆ ಮಾರು ಹೋಗುತ್ತಿರುವುದು ವಿಪರ್ಯಾಸ.

ಗುರು ಬಸವಣ್ಣನವರು ತಮ್ಮ ವಚನದಲ್ಲಿ ವಿಮುಖರಾದ ಅಂದರೆ ಇಜ್ಜೋಡು(63 ಅಲ್ಲ 36) ಎನ್ನಲಾದ ಗಂಡಹೆಂಡತಿಯರ ಲೌಕಿಕ ಸಂಬಂಧವನ್ನು ಪ್ರಸ್ತಾಪಿಸುವ ಮೂಲಕ ದೇವ- ಭಕ್ತನ ಸಂಬಂಧಕ್ಕೆ ಹೋಲಿಸಿ ತತ್ವನಿಷ್ಟೆ ಮತ್ತು ಸಂಬಂಧಗಳ ಮೌಲ್ಯವನ್ನು ಎತ್ತಿ ಹಿಡಿದಿದ್ದಾರೆ. ಇಲ್ಲಿ ಗಂಡ ತನ್ನ ಹೆಂಡತಿಯನ್ನು ಅತ್ಯಂತ ಪ್ರೀತಿವಿಶ್ವಾಸದಿಂದ ನಡೆಸಿ ಕೊಂಡರೂ ಹೆಂಡತಿಗೆ ಮಾತ್ರ ತನ್ನ ಪತಿಯ ಬಗ್ಗೆ ಕೊಂಚವೂ ಪ್ರೇಮವಿಲ್ಲ. ಆಕೆ ತನ್ನ ಗಂಡನನ್ನು ಪ್ರೀತಿವಿಶ್ವಾಸದಿಂದ ಆದರಿಸುತ್ತಿಲ್ಲ. ಧರ್ಮಪತ್ನಿಯ ಕರ್ತವ್ಯವನ್ನು ಪಾಲಿಸುತ್ತಿಲ್ಲ. ಅದರಂತೆ ಧಾರ್ಮಿಕ/ಸಾಮಾಜಿಕ/ಸಾಂಸ್ಥಿಕ ಗುರುತಿಗಾಗಿಯೊ ಅಥವ ಧರ್ಮ-ಸಂಸ್ಕೃತಿಗಳ ಹಂಗಿಗಾಗಿಯೊ ತಾನು ಧರಿಸಿರುವ (ಲಿಂಗವನ್ನು ಗೂಡಿನಲ್ಲೋ ಅಥವ ಪೂಜೆ ಜಗುಲಿಯ ಮೇಲೊ ಇಟ್ಟಿರುವ) ಇಷ್ಟಲಿಂಗದ ಮೇಲೆ ಭಕ್ತಿ-ಶ್ರದ್ಧೆ-ನಿಷ್ಟೆಯಿಂದ ಎಂದೂ ಪೂಜೆ ಮಾಡದ ಭಕ್ತನು ಮತ್ತು ತನ್ನನ್ನು ಪ್ರೀತಿಸುವ ಪತಿಯನ್ನು ಸೇವಿಸದ ಹೆಂಡತಿ ಈ

ಭೂಮಿಯ ಮೇಲೆ ಇದ್ದರೆಷ್ಟು ಹೋದರೆಷ್ಟು? ಇಬ್ಬರೂ ಅಪ್ರಯೋಜಕರು. ಇವರಿಬ್ಬರ ಸಂಬಂಧ ಹೇಗಿದೆಯೆಂದರೆ ಕರು ಹಾಕಿದ ತಾಯಿ ಹಸು ತನ್ನ ಕರುವಿಗೆ ಹಾಲೂಡಿಸಲು ಕಾತುರದಿಂದಿರುವಾಗ ಕರು ಹಾಲು ಕುಡಿಯಲು ಬರದೆಯೊ ಅಥವ ಮನಸ್ಸಿಲ್ಲದೆಯೊ ಜಡವಾಗಿ ಮಲಗಿದಂತೆ. ಇಂಥ ಜಡ ಸಂಬಂಧಗಳು ಎಂದಿಗೂ ಯಶಸ್ವಿಯಾಗುವುದಿಲ್ಲ ಮತ್ತು ಶಾಶ್ವತವೂ ಅಲ್ಲ ಎಂಬ ಸತ್ಯವನ್ನು ಈ ವಚನ ಧ್ವನಿಸುತ್ತಿದೆ.

ಗಂಡ ಗುರು ಲಿಂಗದೇವರ ಭಕ್ತ,
ಹೆಂಡತಿ ಮಾರಿ ಮಸಣಿಯ ಭಕ್ತೆ.
ಗಂಡ ಕೊಂಬುದು ಪಾದೋದಕ-ಪ್ರಸಾದ,
ಹೆಂಡತಿ ಕೊಂಬುದು ಸುರೆ-ಮಾಂಸ.
ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಿಕೆಯ ಹೊರಗೆ ತೊಳೆದಂತೆ
ಲಿಂಗದೇವಾ.

ಇಲ್ಲಿ ಇಜ್ಜೋಡಾದ ಸಂಸಾರದ ದೃಶ್ಯವನ್ನು ಗುರು ಬಸವಣ್ಣನವರು ನಮ್ಮ ಮುಂದಿರಿಸಿದ್ದಾರೆ. ಗಂಡ ಇಲ್ಲಿ ಗುರುಲಿಂಗಜಂಗಮರ ಭಕ್ತನಾಗಿ ಶೋಭಿಸುತ್ತಿದ್ದಾನೆ. ಆತನ ಹೆಂಡತಿ ಮಾತ್ರ ಮಾರಿ ಮಸಣಿಯ ಭಕ್ತಳಾಗಿ ಅಜ್ಞಾನದ ಕೂಪವಾಗಿದ್ದಾಳೆ. ಏಕೆ ಹೀಗೆ !? ಎಂದರೆ ಸದಾ ಹೊರ ಪ್ರಪಂಚದ ಸಂಪರ್ಕದಲ್ಲಿರುವ ಗಂಡಸರಿಗೆ ಸರಿ-ತಪ್ಪುಗಳ ಅರಿವಿನಿಂದ ಸೂಕ್ತ ಕಾಲದಲ್ಲಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು, ಸಮರ್ಥವಾದ ಅವರ ಮನಮತಿಗಳು, ಪ್ರಗತಿಪರ ವಿಚಾರಗಳಿಂದ ಬಹು ಬೇಗ ಆಕರ್ಷಿತರಾಗಿ, ಧೈರ್ಯವಾಗಿ ಆಚರಣೆಗೂ ತರುತ್ತಾರೆ. ಆದರೆ ಮನೆಯ ನಾಲ್ಕು ಗೋಡೆಗಳ ಮಧ್ಯೆ ಕಾಲ ಹಾಕುವ ಹೆಂಗಸರು ಮಾತ್ರ ಹಲವು ರೀತಿಯ ಮೂಢ ನಂಬಿಕೆಗಳನ್ನು ಅಳವಡಿಸಿಕೊಂಡು ಭಯಭೀತಿಗಳಿಂದ ಅನೇಕ ಕ್ಷುದ್ರ ದೇವತೆಗಳ ಆರಾಧನೆ, ಪೂಜೆ, ವ್ರತಗಳನ್ನು ಮಾಡುತ್ತಾ ಜೀವನವನ್ನು ಅಜ್ಞಾನದಿಂದ ಕಳೆಯುತ್ತಾರೆ. ಮೂಢನಂಬಿಕೆಗಳು ಆಳಾಗಿ ಬೇರು ಬಿಟ್ಟಿರುವ ಇಂಥ ಭಕ್ತರನ್ನು ತಿದ್ದುವುದು ಅಸಾಧ್ಯದ ಮಾತು. ಏಕೆಂದರೆ ತಮ್ಮ ಅಜ್ಞಾನ, ನಂಬಿಕೆಗಳನ್ನೆ ಬಲವಾಗಿ ಸಮರ್ಥಿಸುತ್ತಾ ಇಂಥ ಪೂಜೆ ಬಿಟ್ಟರೆ ಕೆಡುಕಾಗುತ್ತದೆಂದು ಗಂಡನೊಡನೆ ವಾದಿಸುತ್ತಾ ತಮ್ಮ ಆಚರಣೆಗಳಿಗೆ ಅಂಟಿಕೊಳ್ಳುತ್ತಾರೆ. ಟಿ.ವಿ. ಮಾಧ್ಯಮಗಳು ಬೆಳಿಗ್ಗೆಯ ಹೊತ್ತು ಹೆಚ್ಚಾಗಿ ಇಂಥ ಮೂಢ ವಿಚಾರಗಳನ್ನೆ ಜ್ಯೋತಿಷಿ, ಮಂತ್ರವಾದಿ, ಪುರೋಹಿತರಿಂದ ಹೇಳಿಸಿ ಭಯಭೀತಿಯಿಂದ ಕೂಡಿದ ಸಮಸ್ಯೆಗಳಿಗೆ ವ್ರತ, ಪೂಜೆಗಳ ಪರಿಹಾರ, ಅದಕ್ಕೆ ತಗಲುವ ಖರ್ಚು, ಬೇಕಾದ ಸಾಮಾಗ್ರಿ ಮತ್ತು ಆಚರಿಸುವ ವಿಧಾನಗಳ ಪ್ರಾತ್ಯಕ್ಷಿಕೆ, ವಾರ,ತಿಥಿ, ನಕ್ಷತ್ರ ಮುಂತಾದ ವಿಚಾರಗಳನ್ನು ಪೋನ್ ಇನ್ ಕಾರ್ಯಕ್ರಮಗಳ ಮೂಲಕ ಪ್ರಚಾರ ಮಾಡುತ್ತಾರೆ. ಹೀಗಾಗಿ ಗಂಡನು ಗುರುಲಿಂಗಜಂಗಮರ ಪೂಜೆ ಮಾಡಿ ಪಾದೋದಕ-ಪ್ರಸಾದ ಪಡೆದು ಸದ್ಭಕ್ತಿ-ಸದಾಚಾರ ಸಂಪನ್ನನಾದರೆ ಹೆಂಡತಿ ಮಾತ್ರ ತಾನು ನಂಬಿದ ಮಾರಿಮಸಣಿಯ ಪೂಜೆ ಮಾಡಿ ಸುರೆ(ಮದ್ಯ)ಮಾಂಸವನ್ನು ಪ್ರಸಾದವೆಂದು ಭಯ-ಭಕ್ತಿಯಿಂದ ಪಡೆದು ವಾಮಮಾರ್ಗದಲ್ಲಿರುತ್ತಾಳೆ.

ಅಪ್ಪ ಬಸವಣ್ಣನವರು ಮುಂದೆ ಹೇಳುತ್ತಾರೆ 'ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಿಕೆಯ ಹೊರಗೆ ತೊಳೆದಂತೆ' ಎಂಬ ಉಪಮೆಯೊಂದಿಗೆ ಸಮಾಜ ಮತ್ತು ಕುಟುಂಬದ ಅಂತಃರಂಗ ಬಹಿರಂಗದ ಸ್ವರೂಪವನ್ನು ಅದ್ಭುತವಾಗಿ ಬಿಂಬಿಸಿದ್ದಾರೆ. ಭಾಂಡ ಭಾಜನ ಅಂದರೆ ಮನೆಯಲ್ಲಿರುವ ಪಾತ್ರೆ ಮತ್ತು ಇತರ ಅಡುಗೆ ಸಲಕರಣೆಗಳ ಸಮೂಹ. ಇಂಥ ಪಾತ್ರೆಗಳನ್ನು ಹೊರ ಒಳಗೆ ಶುದ್ಧವಾಗಿ ತೊಳೆಯದೆ ಬಳಸಿದರೆ ಅದರಿಂದ ಆರೋಗ್ಯಕ್ಕೆ ಹಾನಿ. ಆದ್ದರಿಂದಲೆ ಮನೆಯವರ ಆಹಾರ, ಆಚಾರ, ವಿಚಾರ, ಶರೀರದ ಸ್ವಚ್ಛತೆ, ಸುತ್ತಲಿನ ಸ್ವಚ್ಛತೆ, ಒಳಗಿನ ವ್ಯವಹಾರ- ಇವು ಶುದ್ಧವಿಲ್ಲದವರ ಸಂಸಾರ ಹೆಂಡದ ಮಡಕೆಯನ್ನು ಹೊರಗೆ ಮಾತ್ರ ತೊಳೆದಂತೆ! ಕುಟುಂಬ ಒಂದು ಮಡಕೆಯಿದ್ದಂತೆ. ಗಂಡನನ್ನು ಅದರ ಹೊರಭಾಗಕ್ಕೆ ಹೋಲಿಸಿ; ಹೆಂಡತಿಯನ್ನು ಮಡಕೆಯ ಒಳಭಾಗಕ್ಕೆ ಹೋಲಿಕೆ ಕೊಟ್ಟು ಹೇಳುತ್ತಿದ್ದಾರೆ. ಪಾತ್ರೆಯ ಒಳಭಾಗ ಮುಖ್ಯವಾಗಿ ಮನೆಯ ಯಜಮಾನಿಯಾದ ಪತ್ನಿಯ ಆಚಾರ, ವಿಚಾರ, ವಿಹಾರಗಳು ಶುದ್ಧವಾಗಿರಬೇಕು. ಅದಕ್ಕೆ ಮಹಾತ್ಮ ಗಾಂಧಿಯವರು 'ಮನೆಯಲ್ಲಿ ಒಬ್ಬ ಹೆಣ್ಣು ಶಿಕ್ಷಣ ಪಡೆದರೆ ಒಂದು ಶಾಲೆ ತೆರೆದಂತೆ' ಎಂದು ಹೇಳಿದ್ದು. ಮನೆಯೊಡತಿ ಅಜ್ಞಾನಿಯಾದರೆ ಇಡೀ ಮನೆಯೆ ಅಜ್ಞಾನದ ಕೂಪವಾಗುತ್ತದೆ. ಬದಲಿಗೆ ಮನೆಯಾಕೆ ಸುಧಾರಿಸಿದರೆ ಇಡೀ ಕುಟುಂಬವೆ ಸುಧಾರಿಸುತ್ತದೆ. ಏಕೆಂದರೆ ಮಕ್ಕಳೊಂದಿಗೆ ಮತ್ತು ಕುಟುಂಬದ ಇತರ ಸದಸ್ಯರೊಂದಿಗೆ ಹೆಚ್ಚು ಸಮಯ ಕಳೆಯುವ ಅವಕಾಶ ಸಿಗುವುದು ಮನೆಯ ಗೃಹಿಣಿಗೆ ಮಾತ್ರ, ಗಂಡನಾದವನು ತನ್ನ ಉದ್ಯೋಗದ ನಿಮಿತ್ತ ಮನೆಯನ್ನು ಬೆಳಗ್ಗೆ ಬಿಟ್ಟರೆ ಹಿಂದಿರುಗುವುದು ಸಂಜೆಯ ನಂತರವೆ. ಆದ್ದರಿಂದ ಮನೆಯ ಸುಧಾರಣೆಗೆ ಮನೆಯೊಡತಿಯನ್ನೆ ಹೆಚ್ಚು ಹೊಣೆಗಾರಳನ್ನು ಮಾಡುತ್ತಿರುವುದು. ಗುರು ಬಸವಣ್ಣನವರು ಹನ್ನೆರಡನೆ ಶತಮಾನದಲ್ಲಿ ಇಂಥ ಅದ್ಭುತ ಕ್ರಾಂತಿಯನ್ನು ಮಾಡಿ ತೋರಿಸಿದ್ದು ಇಲ್ಲಿ ಸ್ತುತ್ಯಾರ್ಹ. ಅನುಭವ ಮಂಟಪದಲ್ಲಿ ಇದ್ದರೆನ್ನಲಾದ ಸುಮಾರು 60ಶರಣೆಯರಲ್ಲಿ 33 ವಚನಕಾರ್ತಿಯರಿದ್ದುದು ಇದಕ್ಕೆ ಸಾಕ್ಷಿ.

ಅಂತೆಯೇ ಮನೆಯ ಹೊರಭಾಗವಾದ ಪತಿ ಹೊರಜಗತ್ತಿನಲ್ಲಿ , ಸಮಾಜದಲ್ಲಿ ಹೆಚ್ಚಾಗಿ ವ್ಯವಹರಿಸುತ್ತಿದ್ದು ಅವನು ಸಾಕಷ್ಟು ಬದಲಾವಣೆಗಳಿಗೆ ಹೊಂದಿಕೊಳ್ಳುತ್ತಾನೆ. ಇದು ಪಾತ್ರೆಯ ಹೊರಮೈಯನ್ನು ಶುದ್ಧವಾಗಿ ತೊಳೆದಂತೆ. ಕುಟುಂಬದಲ್ಲಿ ಇಬ್ಬರ ಪಾತ್ರವೂ ಬಹು ಮುಖ್ಯವಾದುದು. ಆದ್ದರಿಂದ ಉಭಯತರು ಬಂಡಿ ಹಾದಿಯ ಮೇಲೆ ಸರಿಯಾಗಿ ಸಾಗಲು ಎರಡು ಎತ್ತುಗಳು ಸಮಾನವಾಗಿ ಹೆಜ್ಜೆ ಹಾಕಿದಂತೆ ಜೀವನ ಪಥದಲ್ಲಿ ಪತಿಪತ್ನಿಯರು ಮುಂದುವರಿಯಬೇಕು. ಒಬ್ಬರು ಏರುಪೇರಾದರೂ ಸಂಸಾರದ ಬಂಡಿ ಸುಗಮವಾಗಿ ಸಾಗದು ಎಂಬ ಸಾಮಾಜಿಕ ಮತ್ತು ಕೌಟುಂಬಿಕ ಜೀವನ ಸಂದೇಶವನ್ನು ಬಿತ್ತರಿಸಿದ್ದಾರೆ.

ಬಸವಾದಿ ಪ್ರಮಥರು ಕೇವಲ ಸಮಾಜದಲ್ಲಿರುವ ವಿರಸ ಸಂಸಾರವನ್ನು ಮಾತ್ರ ನಮಗೆ ತೋರಿಸುವ ಬೆನ್ನಲ್ಲೆ ಸಮಾನ ಮನಸ್ಕರಾದ, ಪರಸ್ಪರ ಅತ್ಯಂತ ಪ್ರೀತಿ-ಗೌರವವುಳ್ಳ ದಂಪತಿಗಳಿರುವ ಕುಟುಂಬದ ದೃಶ್ಯವನ್ನು ಸಹ ವಚನ ರೂಪದಲ್ಲಿ ನಮ್ಮ ಮುಂದಿರಿಸಿದ್ದಾರೆ. ಅಂಥ ಒಂದೆರಡು ವಚನಗಳನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

(ಮುಂದುವರಿಯುವುದು...)

ಹಿಂಸೆಯ ಪ್ರಚಂಡ ಪ್ರಭಾವ

- ಪೂಜ್ಯ ಶ್ರೀ ಬಸವಪ್ರಭ ಸ್ವಾಮೀಜಿ

ಅಸೂಯೆ ಮತ್ತು ಹಿಂಸೆ ಮಾನವನ ದೇಹದ ಮನಸ್ಸಿನ ಮೇಲೆ ತುಂಬಾ ದುಷ್ಪರಿಣಾಮವನ್ನು ಉಂಟು ಮಾಡುತ್ತವೆ. ಮಾನವನ ಮನಸ್ಸಿನಲ್ಲಿ ಗುಪ್ತವಾಗಿ ಹುದುಗಿರುವ ಹಿಂಸೆ ಸಂಪೂರ್ಣವಾಗಿ ದೇಹವನ್ನು ನಾಶ ಮಾಡುತ್ತದೆ. ಅದೇ ಹಿಂಸೆ ಪ್ರಕಟವಾದರೆ ಜಗತ್ತಿನ ವಿನಾಶಕ್ಕೆ ಕಾರಣವಾಗುತ್ತದೆ. ಸದಾ ಇನ್ನೊಬ್ಬರ ತಪ್ಪನ್ನು ಎತ್ತಿಹಿಡಿದು ಕಿರುಕುಳ ಕೊಟ್ಟು ಪರಿಸರವನ್ನು ನಾಶಮಾಡುವ ಪ್ರವೃತ್ತಿ ಹಿಂಸೆಯ ಪ್ರಚಂಡ ಪ್ರಭಾವವಾಗಿದೆ.

ಪರಮಾತ್ಮನು ಈ ಜಗತ್ತಿನಲ್ಲಿ ನಿಸರ್ಗದ ಸೌಂದರ್ಯವನ್ನು, ಬಣ್ಣ ಬಣ್ಣದ ಹೂಗಳನ್ನು ಆಕಾಶದಲ್ಲಿ ಹೊಳೆಯುತ್ತಿರುವ ನಕ್ಷತ್ರಗಳನ್ನು ಸೃಷ್ಟಿಸಿದ್ದಾನೆ. ಅದಕ್ಕಾಗಿ ಗುರು ಬಸವಣ್ಣನವರು ಕರ್ತೃ ಲಿಂಗದೇವಾ ಎಂದಿದ್ದಾರೆ. ತನ್ನ ವಿನೋದಕ್ಕೆ ಈ ಜಗತ್ತನ್ನು ಸೃಷ್ಟಿಸಿದ ದೇವನು ಇಲ್ಲಿ ಜೀವಾತ್ಮರುಗಳನ್ನು ಪ್ರೀತಿಸಲು ಕಳುಹಿಸಿದ್ದಾನೆ. ಆದರೆ ಇಲ್ಲಿ ಬಂದಿರುವ ನಾವು ಪ್ರೀತಿಯಿಂದ ಬದುಕುವ ಧ್ಯೇಯವನ್ನು ಮರೆತಿದ್ದೇವೆ. ಒಳ್ಳೆಯದನ್ನು ನೋಡಿ ಆನಂದಿಸಲಾಗದ ಮಾನವ ಏನೆಲ್ಲವನ್ನು ಒಂದು ಕ್ಷಣಾರ್ಧದಲ್ಲಿ ಅಳಿಸಿಬಿಡುತ್ತಾನೆ. ಇದುವೇ ಹಿಂಸೆಯ ಪ್ರವೃತ್ತಿ. ನಿಸರ್ಗದ ಒಂದು ಅಂಗವಾದ ಮಾನವನು ತಾನು ಈ ನಿಸರ್ಗದ ಭಾಗವೆಂಬುದನ್ನು ಮರೆತು ತಾನೊಬ್ಬನೇ ಬದುಕಬೇಕೆಂಬ ಸ್ವಾರ್ಥದಿಂದ ಅದೆಷ್ಟೋ ಜೀವಿಗಳನ್ನು ಕೊಂದಿದ್ದಾನೆ. ಯುದ್ಧ ಮಾಡಿ ಪರಿಸರ ಹಾಳುಗೆಡವಿದ್ದಾನೆ. ಜೊತೆಗೆ ತನ್ನನ್ನು ತಾನು ನಾಶಮಾಡಿಕೊಳ್ಳುವ ಪರಿಸ್ಥಿತಿಗೆ ಬಂದು ತಲುಪಿದ್ದಾನೆ. ಇದುವೇ ಹಿಂಸೆ. ಇಂತಹ ಹಿಂಸೆಯಿಂದಲೇ ಎಷ್ಟೋ ರಾಜ ಮಹಾರಾಜರು ತಮ್ಮ ಸರ್ವಸ್ವವನ್ನು ಕಳೆದುಕೊಂಡು ಬೀದಿ ಪಾಲಾದರು. ಕೆಲವರು ದ್ವೇಷ-ಅಸೂಯೆಯಿಂದ ಹಿಂಸೆ ಪ್ರವೃತ್ತಿಗಿಳಿದು ಯುದ್ಧಮಾಡಿ ಕೊನೆಗೆ ಪರಿವರ್ತನೆಗೊಂಡು ಪರಿವ್ರಾಜಕರಾಗಿ ಇಂದು ಅವರು ಇತಿಹಾಸವಾಗಿದ್ದಾರೆ. ಅಂಥವರಲ್ಲಿ ಅಶೋಕ ಮಹಾರಾಜರು ಒಬ್ಬರು.

ಒಂದು ಸಾರಿ ಅಶೋಕ ಚಕ್ರವರ್ತಿ ಓರಿಸ್ಸಾದ ಸ್ವಾಭಿಮಾನಿಗಳ ಮೇಲೆ ಇದ್ದಕ್ಕಿದ್ದಂತೆ ಕಳಿಂಗ ಯುದ್ಧ ಸಾರಿದ. ದಿಗ್ಭ್ರಾಂತರಾದ ಓರಿಸ್ಸಾದ ಜನರು ಪಾಪ! ಮುಗ್ಧರು, ಸತ್ಯವಂತರಿದ್ದರು. ಅವರಲ್ಲಿ ಕೇವಲ ಐದು ಸಾವಿರ ಜನ ಸೈನಿಕರು ಮಾತ್ರ ಇದ್ದರು. ಅಶೋಕ ಚಕ್ರವರ್ತಿಯ ಸೈನ್ಯ ಒಂದು ಲಕ್ಷಕ್ಕೂ ಹೆಚ್ಚು ಇತ್ತು. ಆದರೆ ಅವರು ಹೆದರಲಿಲ್ಲ, ಸ್ವಾಭಿಮಾನದಿಂದ ಯುದ್ಧಕ್ಕೆ ಧುಮುಕಿದರು. ಆ ಯುದ್ಧದಲ್ಲಿ ಎರಡು ಕಡೆಯಿಂದ ಸಾವಿರ ಸಾವಿರ ಸೈನಿಕರು ಸತ್ತರು. ಆ ಕ್ಷಣದಲ್ಲಿ ಅವರ ಹೆಂಡತಿಯರು, ಮಕ್ಕಳು ಅನಾಥರಾಗಿ ತಮ್ಮವರ ಶವವನ್ನು ಹುಡುಕುತ್ತಾ ರೋಧಿಸುತ್ತಿದ್ದರು. ಯುದ್ಧ ಭೂಮಿಯಲ್ಲಿ ರಕ್ತ ನದಿಯೋಪಾದಿಯಲ್ಲಿ ಹರಿಯುತ್ತಿತ್ತು. ಎಲ್ಲಿ ನೋಡಿದರಲ್ಲಿ ರಕ್ತದೋಕುಳಿ. ಆ ದೇಶದ ಸಾಮ್ರಾಟನಾಗಬೇಕೆಂದು ಅಶೋಕ ಚಕ್ರವರ್ತಿ ಯುದ್ಧವನ್ನೇನೊ ಗೆದ್ದ. ಆದರೆ ಯುದ್ಧದ ರಣರಂಗದಲ್ಲಿ ಒಂದು ಸಾರಿ ಕಣ್ಣಾಡಿಸುತ್ತಾನೆ, ಒಂದು ಕಡೆ ರಕ್ತಸಿಕ್ತವಾಗಿ ಬಿದ್ದಿದ್ದ ತನ್ನ ತಂದೆ-ತಾಯಿಯ ಶವದ ಮುಂದೆ ಅನಾಥವಾಗಿ ಅಳುತ್ತಿರುವ ಮಕ್ಕಳು, ಮತ್ತೊಂದು ಕಡೆ ವಯಸ್ಸಾದ ವೃದ್ಧರು ತಮ್ಮ ಮಕ್ಕಳನ್ನು ಕಳೆದುಕೊಂಡು ಆಕ್ರಂದನ ಮಾಡುತ್ತಿರುವ ದೃಶ್ಯ. ಇವನ್ನೆಲ್ಲವನ್ನು ನೋಡಿ ತನ್ನ ಆಸ್ಥಾನದ ಬೌದ್ಧ ಭಿಕ್ಕು ಉಪಗುಪ್ತನ ಕಡೆಗೆ ನೋಡಿ ಉಪಗುಪ್ತಾ; ಏನಿದು! ಎಂಥ ಅಘಾತವಾಯಿತು. ನಾನು ಯಾರಿಗಾಗಿ ಯಾವ ಪುರುಷಾರ್ಥಕ್ಕಾಗಿ ಯುದ್ಧಮಾಡಿದೆ. ಆ ಅನಾಥ ಮಕ್ಕಳ, ವೃದ್ಧರ ಆಕ್ರಂದನ ಮತ್ತು ತುಂಡು ತುಂಡಾಗಿ ಬಿದ್ದಿರುವ ಆ ಶವಗಳ ಕಡೆಗೆ ನೋಡುತ್ತಾ ದಿಗ್ಭ್ರಾಂತನಾಗಿ ನಿಂತಿದ್ದ ಅಶೋಕ ಚಕ್ರವರ್ತಿಯ ಕಣ್ಣಲ್ಲಿ ತನಗರಿವಿಲ್ಲದಂತೆ ಕಣ್ಣೀರಿನ ಕೋಡಿ ಹರಿಯತೊಡಗಿತು.

ಆಗ ಅಶೋಕ ಚಕ್ರವರ್ತಿಯನ್ನು ಎಚ್ಚರಿಸುತ್ತಾ ಉಪಗುಪ್ತನು 'ಮಹಾರಾಜ ಇದೆಲ್ಲಾ ನಿನ್ನಿಂದಲೇ ನಡೆದದ್ದು; ಇದಕ್ಕೆಲ್ಲಾ ಕಾರಣ ನೀನೆ. ನಿನಗೆಂದು ಕ್ಷಮೆ ಇಲ್ಲ. ಅನಂತ ಜೀವಿಗಳ ಜೀವವನ್ನು ತೆಗೆದುಕೊಂಡಿದ್ದೀಯ. ನೀನು ಈಗಿನಿಂದಲೇ ಪರಿವರ್ತನೆಯಾಗಬೇಕು. ಈ ಆಕ್ರಮಣಕಾರಿ ಯುದ್ಧವನ್ನು ಬಿಟ್ಟುಬಿಡು. ಹಿಂಸೆಯು ಒಳ್ಳೆಯದಲ್ಲ. ನಿನ್ನಿನ್ನು ನೀನರಿತು ಬಾಳು. ನೀನ್ಯಾರೆಂಬುದನ್ನು ತಿಳಿದು ನೋಡು. ಬೋಧಿಸತ್ವವನ್ನು ಪಡೆದುಕೊಂಡು ನಿನ್ನ ಜನ್ಮವನ್ನು ಸಾರ್ಥಕ ಪಡಿಸಿಕೊ' ಎಂದು ಬೋಧಿಸಿದಾಗ ಅಶೋಕ ಚಕ್ರವರ್ತಿ ಒಂದು ಕ್ಷಣ ಯೋಚನೆ ಮಾಡಿ ಉಪಗುಪ್ತನ ಪಾದಕ್ಕೆರಗಿ ತನ್ನ ತಪ್ಪನ್ನು ಮನ್ನಿಸಲು ಬೇಡಿಕೊಂಡನು. ಅಷ್ಟೇ ಅಲ್ಲದೇ ತನ್ನ ಮತ್ತು ಇದುವರೆಗೆ ಗಳಿಸಿಕೊಂಡ ಎಲ್ಲಾ ರಾಜ್ಯವನ್ನು ತೊರೆದು ಭಿಕ್ಕುವಾಗಿ ಪರಿವರ್ತನೆ ಹೊಂದಿ, ಅರಣ್ಯಕ್ಕೆ ಹೋಗಿ ತಪಸ್ಸು ಆಚರಣೆಯಲ್ಲಿ ತೊಡಗುತ್ತಾನೆ. ಈ ಘಟನೆಯನ್ನು ನೋಡಿದಾಗ ಮಾನವನ ಜೀವನದಲ್ಲಿ ಪರಿವರ್ತನೆ ಎನ್ನುವುದು ಒಂದಿಲ್ಲೊಂದು ಸಾರಿ ಬರುತ್ತದೆ. ಆ ಸಂದರ್ಭದಲ್ಲಿ ಪರಿವರ್ತನೆ ಹೊಂದಿ ಮಹಾ ವ್ಯಕ್ತಿಯಾಗಬೇಕು. ನಾಶಮಾಡುವ, ತಾಪಕೊಡುವ ಈ ಹಿಂಸಾ ಪ್ರವೃತ್ತಿ ನಮ್ಮ ಮನೋ ಭೂಮಿಕೆಯನ್ನು ಕೆಡಿಸುತ್ತದೆ. ಲಿಂಗಾಂಗ ಯೋಗಿ ಶ್ರೀ ಸಿದ್ದರಾಮೇಶ್ವರರು ಹೇಳಿದಂತೆ, 'ಜಗತ್ತನ್ನು ನಾಶ ಮಾಡಲಿಕ್ಕೆ ನಾವು ಬಂದಿಲ್ಲ, ದೇವರು ಸೃಷ್ಟಿಸಿದ ಈ ಜಗತ್ತಿನಲ್ಲಿ ನಾವು ಸಂತೋಷದಿಂದ ಇದ್ದು, ಅನುಭವಿಸಿ ಹೋಗಲಿಕ್ಕೆ ಬಂದಿದ್ದೇವೆ.' ಎಂಬುದನ್ನು ಈ ಕೆಳಗಿನ ವಚನ ನಮಗೆ ಪ್ರೇರಣೆ ನೀಡುತ್ತದೆ:

ಒಬ್ಬರ ಮನೆಯ ಘಾತವ ಮಾಡಿ, ಒಬ್ಬರ ಮನವ ನೋಯಿಸಿ,
ಗಂಗೆಯಲ್ಲಿ ಮುಳುಗಿದೊಡೇನಾಗುವುದಯ್ಯಾ
ಗಂಗೆಯ ತಡಿಯಲ್ಲಿದ್ದು ಚಂದ್ರಂಗೆ ಕಳಂಕ ಬಿಡದಾಗಿತ್ತು
ಇದು ಕಾರಣ ಒಬ್ಬರ ಮನೆಯ ಘಾತವ ಮಾಡದವನೆ
ಒಬ್ಬರ ಮನವ ನೋಯಿಸದವನೆ ಪರಮ ಪಾವನ ನೋಡಾ
ಕಪಿಲಸಿದ್ಧ ಮಲ್ಲಿಕಾರ್ಜುನ.

ಅದಕ್ಕಾಗಿ ಪರರಿಗೆ ನೋವಾಗುವ ರೀತಿಯಲ್ಲಿ ಬದುಕಬಾರದು, ನೋವಾಗದ ರೀತಿಯಲ್ಲಿ ಬದುಕಬೇಕು ಎಂದು ಶರಣರು ಹಾಗೂ ಗುರು ಬಸವಣ್ಣನವರು ಹೇಳಿದ್ದಾರೆ.

ಬೆಂಗಳೂರಿನಲ್ಲಿ ಪೂಜ್ಯ ಮಾತಾಜಿಯವರ 72ನೆಯ ವರ್ಧಂತಿಯ ಆಚರಣೆ

ಪ್ರಥಮ ಮಹಿಳಾ ಜಗದ್ಗುರುಗಳು, ಬಸವ ಧರ್ಮ ಪೀಠಾಧ್ಯಕ್ಷೆಯೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ದಿ.13-3-2017ರಂದು 71 ವರ್ಷಗಳನ್ನು ಪೂರೈಸಿ 72ಕ್ಕೆ ಪಾದಾರ್ಪಣ ಮಾಡುತ್ತಿರುವ ಸನ್ನಿವೇಶದಲ್ಲಿ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

1. ದಿ.12-3-2017, ದೇವ (ಭಾನು)ವಾರದಂದು ಬೆಳಿಗ್ಗೆ 10-30 ಗಂಟೆಗೆ ಬೆಂಗಳೂರಿನ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಪೂಜ್ಯ ಮಾತಾಜಿಯವರ ವರ್ಧಂತಿ ಕಾರ್ಯಕ್ರಮ ಏರ್ಪಡಿಸಲಾಗಿದೆ.

2. ದಿ. 13-3-2017, ಸೋಮ(ಶಿವ)ವಾರದಂದು ಬೆಂಗಳೂರಿನ ಬಸವ ಮಂಟಪದಲ್ಲಿ ಬೆಳಿಗ್ಗೆ 8ರಿಂದ ವಿಶೇಷ ಪೂಜೆ. ಬೆ.10ರಿಂದ ಸಹಸ್ರ ಬಸವ ಮಂತ್ರ ಪಠಣ ಹಾಗೂ ಪುಷ್ಪಾರ್ಚನೆ ಪೂಜ್ಯ ಮಾತಾಜಿಯವರಿಗೆ ಆಯುರಾರೋಗ್ಯ ಭಾಗ್ಯಕ್ಕಾಗಿ ಹಾರೈಸಿ ಮಾಡುವ ಈ ಮಂತ್ರ ಪಠಣ / ಪುಷ್ಪಾರ್ಚನೆಯಲ್ಲಿ ಶರಣ ಬಂಧುಗಳು ಭಾಗವಹಿಸಬಹುದು. ನೇತೃತ್ವ: ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ.

ಗಣ ಮೇಳದಲ್ಲಿ ಸಂದೇಶ ವಾಚನ

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

॥ಓಂ ಶ್ರೀ ಗುರು ಬಸವ ಲಿಂಗಾಯ ನಮಃ॥

ಸೃಷ್ಟಿಕರ್ತ ಲಿಂಗದೇವನನ್ನು ಸ್ಮರಿಸಿ, ಧರ್ಮಗುರು ಬಸವಣ್ಣನವರನ್ನು ಸ್ಮರಿಸಿ, ಈ ಪವಿತ್ರ ಶರಣ ಗಣ ಮೇಳದಲ್ಲಿ ಸಮಾವೇಶವಾಗಿರುವ ಎಲ್ಲ ಶರಣ ಬಂಧುಗಳಿಗೂ ಶರಣು ಶರಣಾರ್ಥಿಗಳು.

ಇಂದು ನಡೆಯುತ್ತಲಿರುವ ಶರಣ 'ಗಣ ಮೇಳ' ವು ಅತ್ಯಂತ ಪವಿತ್ರವಾದ ಗಣ ಸಮಾವೇಶ. ಧರ್ಮಪಿತರ ಕಾಲದಲ್ಲಿ ಹಲವಾರು ಗಣಪರ್ವಗಳು, ಗಣ ಸಭೆಗಳು ನಡೆದು, ಸಂಸ್ಕಾರ ಮತ್ತು ಸಂಘಟನೆ ಎರಡನ್ನೂ ಸಾಧಿಸಿದವು. ಹರಿಹರ ಮಹಾಕವಿ ಬಣ್ಣಿಸುವಂತೆ ಧರ್ಮಪಿತರು 'ಪಾಷಂಡಿ ಭೂಮಿಯೊಳು ಭಕ್ತಿಯನ್ನು ಬಿತ್ತಿ ಬೆಳೆದು ಗಣಪರ್ವಗಳನ್ನು ಸಫಲಂ ಮಾಡಿ, ಭಕ್ತಿಯ ಬಣ್ಣವೇರಿಸಿದ ಕಾರಣಿಕರಾದರು.' ಕಲ್ಯಾಣ ಪಟ್ಟಣದಲ್ಲಿ ಸಾಕಷ್ಟು ಗಣಪರ್ವಗಳನ್ನು ಸಂಯೋಜಿಸಿದರು.

'ಗಣ' ಎಂದರೇನು? ಗಣ ಎಂದರೆ ಸಮೂಹ, ಸಮಾಜ, ಧರ್ಮಪಿತ ಬಸವಣ್ಣನವರು 'ಗಣ ಧರ್ಮ' ಎಂಬುದನ್ನು ಸ್ಥಾಪಿಸಿದರು. ಕುಟುಂಬ, ಜಾತಿ, ಕುಲ, ವರ್ಣಗಳ ಸೀಮೆ ದಾಟಿದ ಗಣ ಧರ್ಮದ ಪರಿಕಲ್ಪನೆ ಕೊಟ್ಟರು. ಈ ಗಣ ಧರ್ಮದ ಸದಸ್ಯರನ್ನು ಬಂಧಿಸುವ ಸೂತ್ರ ಜಾತಿಕುಲವಲ್ಲ, ವರ್ಣ-ವರ್ಗವಲ್ಲ 'ದೇವರ ಕುರುಹು' ಎಂಬುದನ್ನು ಸಾರಿದರು. ದೇವಸಹಿತ ಭಕ್ತಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಭಕ್ತರಲ್ಲಿ ಕುಲವನ್ನು ಅರಸುವುದಿಲ್ಲ ಎಂದು ಘೋಷಿಸಿ ತಾತ್ತ್ವಿಕ ಗಣಧರ್ಮದ ಸೂತ್ರವನ್ನು ಬೋಧಿಸಿದರು. ಈ ತಾತ್ತ್ವಿಕ ಗಣಧರ್ಮದ ಸದಸ್ಯತ್ವ ಪಡೆದವರು ಸಹಬಾಳ್ವೆ ಮಾಡುವ ಹಿರಿಯ ಗುಣ ಹೊಂದಬೇಕೆಂದು ಸಾರಿ ಹೇಳಿದರು.

ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ, ಲಿಂಗದೇವಾ.

ಕಾಗೆಯಂತಹ ಪಕ್ಷಿ ಅನ್ನದ ಅಗುಳನ್ನು ಕಾಣುತ್ತಲೇ 'ಕಾ ಕಾ' ಎಂದು ಕರೆದು ತನ್ನ ಬಳಗವನ್ನು ಸೇರಿಸಿಕೊಂಡು ತಿನ್ನುತ್ತದೆ. ಕೋಳಿಯು ಕಾಳುಗಳನ್ನು ಕಾಣುತ್ತಲೇ 'ಕೊ ಕ್ಕೊ' ಎಂದು ಕರೆದು ಹಂಚಿಕೊಂಡು ತಿನ್ನುತ್ತದೆ. ಭಕ್ತಿವಂತನಾಗಿ ಒಬ್ಬ ವ್ಯಕ್ತಿಯು ಇಂತಹ ಸಮುದಾಯ ಜೀವನವನ್ನು ನಡೆಸದಿದ್ದರೆ ಹೇಗೆ? ಆದ್ದರಿಂದ ಭಕ್ತಿಜೀವಿಯಾದವನು ಭಕ್ತಿಪಕ್ಷವನ್ನು ಕಟ್ಟಿಕೊಂಡು, ಸಹಬಾಳ್ವೆ ನಡೆಸಬೇಕು.

ಕರ್ಮವೆಂಬ ಅಂಕದೊಡನೆ ತೊಡರಿದೆ
ಬಿನ್ನಪವ ಅವಧಾರು; ನಿಮ್ಮಾಳಿನ ಭಾಷೆಯ
ಕಡೆಗಳಕ್ಕೆ ನೂಂಕುವೆ ಕೆಡಹುವೆನಂಕವ
ಕರೆದೊಡೋ ಎನಿಸಿದಡೆ ನಿಮ್ಮಾಳಲ್ಲ
ಶಿವಶರಣೆಂಬ ದಂಡೆಯ ಹೂಡಿ

ಗಣಮೇಳಾಪವೆಂಬ ಅಲಗಿನಿಂದಿರಿವೆ, ಲಿಂಗದೇವಾ

ಕರ್ಮ, ಭವ ಎಂಬುದೇ ಶತ್ರು. ಈ ಭವವೆಂಬ ಶತ್ರುವಿನೊಡನೆ ಭಕ್ತನು ಹೋರಾಟಕ್ಕೆ ನಿಲ್ಲುತ್ತಾನೆ. ಈ ಶತ್ರುವನ್ನು ಗೆಲ್ಲಬೇಕಾದರೆ ಎರಡು ಸಾಧನಗಳಿವೆ. ಒಂದು ಪರಮಾತ್ಮನಿಗೆ ಶರಣಾಗುವುದು; ಇನ್ನೊಂದು ಶರಣರ ಸಂಗದಲ್ಲಿ ಒಡನಾಡುವುದು. 'ಗಣ ಮೇಳಾಪ' -ಶರಣ ಸಂಗದಲ್ಲಿ ಸೇರಿ ದೈವೀಚಿಂತನೆ ಮಾಡುವುದೇ ಅತ್ಯಂತ ಪ್ರಬಲ ಶಸ್ತ್ರ

ಧರ್ಮಗುರುವಿನ ಆದೇಶದಂತೆ ನಾವು ನೀವುಗಳೆಲ್ಲ ಗಣಮೇಳದಲ್ಲಿ ಭಾಗಿಗಳಾಗಿ ಇಲ್ಲಿ ಒಟ್ಟುಗೂಡಿದ್ದೇವೆ. ಈ ಗಣ ಮೇಳವು ಸಮಾನತೆ, ಧಾರ್ಮಿಕ ಸಹೋದರತ್ವ-ಸಹ ಬಾಳ್ವೆಗಳ ಸಂಕೇತವುಳ್ಳ ಕಾರ್ಯಕ್ರಮವಾಗಿದೆ. ಸೃಷ್ಟಿಕರ್ತನಿಗೆ ಮತ್ತು ಧರ್ಮ ಗುರುವಿಗೆ ಕೃತಜ್ಞತೆಯನ್ನು ಸಮರ್ಪಿಸುವ ಶ್ರೇಷ್ಠ ಕ್ರಿಯೆಯಾಗಿದೆ.

ಬಸವ ಗುರುವಿಗೆ ಶರಣಾಗಿದ್ದೇನೆ.
ಜಗತ್ ಕರ್ತನಿಗೆ ಶರಣಾಗಿದ್ದೇನೆ
ಶರಣ ಗಣಕ್ಕೆ ಶರಣಾಗಿದ್ದೇನೆ.

ಎಂಬ ತ್ರಿತತ್ತ್ವದ ಪ್ರತೀಕವಾಗಿದೆ. ಸೃಷ್ಟಿಕರ್ತ ಮತ್ತು ಧರ್ಮಕರ್ತರನ್ನು ಕೃತಜ್ಞತೆಯಿಂದ ಸ್ತುತಿಸಲು ನಾವಿಲ್ಲಿ ಸೇರಿದ್ದೇವೆ.

ಸರ್ವ ಶರಣರ ದಿನಾಚರಣೆ

ಒಂದು ತತ್ತ್ವಜ್ಞಾನವಾಗಲೀ, ಧರ್ಮವಾಗಲೀ ಜೀವಂತವಾಗಿರಬೇಕಾದರೆ ಅದು ಪರಂಪರೆಯಾಗಿ (heritage) ಸಾಗಿಬರಬೇಕು. ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಲಿಂಗಾಯತ ಧರ್ಮದ ಪರಂಪರೆಯು ಶೂನ್ಯ ಪೀಠಾಧೀಶ ಅಲ್ಲಮಪ್ರಭು, ಚಿನ್ಮಯಜ್ಞಾನಿ ಚೆನ್ನಬಸವಣ್ಣ, ಬಸವಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರಶರಣ ಮಡಿವಾಳ ಮಾಚಿದೇವ ಇವರನ್ನೊಡಗೂಡಿ ಅವ್ಯಾಹತವಾಗಿ ಸಾಗಿ ಬಂದಿದೆ. ಗುರು ಬಸವಣ್ಣನವರ ಕಾಲದ ಆದಿ ಪ್ರಮಥರಿಂದ ಈವರೆಗೆ ಆಗಿ ಹೋಗಿರುವ ಲಿಂಗಾಂಗಯೋಗಿಗಳು, ಶರಣರು ಅಸಂಖ್ಯಾತರು. ಅವರ ಜ ಯಂತಿ -ಲಿಂಗೈಕ್ಯ ದಿನ ಆಚರಿಸಲು ವರ್ಷದ 365 ದಿನಗಳು ಸಾಕಾಗವು. ಅಂಥ ಸಮೃದ್ಧ ಪರಂಪರೆಯ ವಾರಸುದಾರರು ನಾವು. ಆದ್ದರಿಂದ ಜಗತ್ತಿನ ಮೊಟ್ಟಮೊದಲ ಯೋಗಿಯೂ, ಓಂಕಾರದ ದ್ರಷ್ಟಾರನೂ, ಭಾರತೀಯ ಧಾರ್ಮಿಕ ಪರಂಪರೆಯ ಮೂಲಿಗನಾದ ವೇದಪೂರ್ವ ಪ್ರವಾದಿ"ಯೋಗಿರಾಜ ಶಿವ"ನ ತಪಸ್ಸಿನ ದಿನವಾದ ''ಶಿವರಾತ್ರಿಯಂದು'' ಸರ್ವ ಶರಣರ ಸಂಸ್ಮರಣೆಯನ್ನು ಒಟ್ಟಾಗಿ ಮಾಡೋಣ.

ಬಸವ ಧರ್ಮ ಸಾರ

ಇಂದು ನಾವು ಸಾರರೂಪದಲ್ಲಿ ಮಂತ್ರಪುರುಷ ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮದ ಸ್ವರೂಪವನ್ನು ಮನನ ಮಾಡೋಣ. ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಕ್ರಿ.ಶ. 1134ರಲ್ಲಿ ಇಂಗಳೇಶ್ವರ ಬಾಗೇವಾಡಿಯಲ್ಲಿ ಜನಿಸಿದರು. ಶೈವ ಬ್ರಾಹ್ಮಣರಾದ ಮಾದಿರಾಜ-ಮಾದಲಾಂಬಿಕೆಯರ ಗರ್ಭದಲ್ಲಿ ಪೂಜಾಫಲದಿಂದ ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಂದು ಜನಿಸಿದರು. ವೈದಿಕ ಧರ್ಮದಲ್ಲಿ ಹುಟ್ಟಿದ ಅವರು ಬಹುದೇವತೋಪಾಸನೆ, ಮೂಢನಂಬಿಕೆ, ವರ್ಣವ್ಯವಸ್ಥೆ, ಜಾತಿಪದ್ಧತಿ ಇವುಗಳ ಪ್ರತಿಫಲವಾದ ಅಸ್ಪೃಶ್ಯತೆ, ಯಜ್ಞ-ಯಾಗಾದಿಗಳ ಹಿಂಸೆ, ಕ್ರೂರದೇವತೆಗಳಿಗೆ ಕೊಡುವ ಪ್ರಾಣಬಲಿ, ಪೂಜಾದಿಗಳಲ್ಲಿದ್ದ ಆಡಂಬರ, ಭೇದಭಾವಗಳನ್ನು ಬಿತ್ತಿ ಬೆಳೆದ ದೇವಾಲಯಗಳ ಸಂಕುಚಿತತೆ, ದೇವ-ಭಕ್ತರ ನಡುವೆ ಇವು ಬೆಳೆಸಿದ

ಕಂದರ, ಸ್ತ್ರೀ ಶೋಷಣೆ ಮುಂತಾದವುಗಳನ್ನು ಕಂಡು ಬೇಸತ್ತು, ನೊಂದು ತಾಯಿ-ತಂದೆ, ಸಂಪ್ರದಾಯದ ಬಂಧನದಿಂದ ಆಚೆ ನಡೆದರು. ಕೂಡಲ ಸಂಗಮದ ಗುರುಕುಲದಲ್ಲಿ ಆಶ್ರಯ ಪಡೆದು, ವಿದ್ಯಾಭ್ಯಾಸ ಕೈಗೊಂಡು, ಸಂಗಮೇಶ್ವರನ ಅರ್ಚಕರಾಗಿ ಕೆಲಸ ಮಾಡತೊಡಗಿದರು. ಒಂದು ದಿನ ಪರಮಾತ್ಮನನ್ನು ಪೂಜಿಸುವ ಇಷ್ಟಲಿಂಗದ ಕಲ್ಪನೆ ಹೊಂದಿದರು. ಈ ಇಷ್ಟಲಿಂಗವೇ ಕೇಂದ್ರವಾದ ಹೊಸ ಧರ್ಮದ ರೂಪುರೇಷೆ ಮೂಡಿಸಿಕೊಂಡು ಬಸವರಸ -ಸಂಗನ ಬಸವಣ್ಣನಾಗಿ ಕಲ್ಯಾಣಕ್ಕೆ ಮುನ್ನಡೆದರು . ರಾಜಕೀಯದಲ್ಲಿ ವಿವಿಧ ಹುದ್ದೆ ಹೊಂದಿ , ಪ್ರಧಾನಿಯೂ ಆದರು. ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಅಭೂತಪೂರ್ವ ಸಂಸ್ಥೆ ಕಟ್ಟಿದರು .ಭಾರತದ ವಿವಿಧ ದಿಕ್ಕುಗಳಿಂದ ಜನರು ಆಗಮಿಸಿದರು. ಅನುಭವ ಮಂಟಪದ ಶರಣರು ವಚನ ಸಾಹಿತ್ಯ ಎಂಬ ಶ್ರೇಷ್ಠ ಕೊಡುಗೆ ಕೊಟ್ಟರು. ತಮ್ಮ ಅನುಯಾಯಿಗಳಾಗಿದ್ದ ಇಬ್ಬರು ಶರಣರ ಮಕ್ಕಳ ಮಧ್ಯೆ ಬಸವಣ್ಣನವರು ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಆ ಶರಣರಲ್ಲಿ ಒಬ್ಬರು ಪೂರ್ವಾಶ್ರಮದಲ್ಲಿ ಹುಟ್ಟಿನಿಂದ ಅಸ್ಪೃಶ್ಯರು, ಮತ್ತೊಬ್ಬರು ಬ್ರಾಹ್ಮಣರು ಇದ್ದುದು ಜಾತಿವಾದಿಗಳ ಅಸಹನೆಗೆ ಕಾರಣವಾಗಿ, ಬಸವಣ್ಣನವರು ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾಯಿತು. ಧರ್ಮಪಿತರು ಗಡಿಪಾರು ಶಿಕ್ಷೆ ಹೊಂದಿದರು . ಅವರ ನಿರ್ಗಮನದ ನಂತರ ವಿವಾಹದಲ್ಲಿ ಭಾಗಿಗಳಾದ ಶರಣರ ವಧೆಯಾಯಿತು. ಗಡಿಪಾರು ಹೊಂದಿ ಕೂಡಲ ಸಂಗಮಕ್ಕೆ ಬಂದು ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ದಿನ ಕ್ರಿ.ಶ. 1196ರಲ್ಲಿ ಲಿಂಗೈಕ್ಯರಾದರು.

ನಮ್ಮ ಧಾರ್ಮಿಕ ಸಂಹಿತೆಯಾದ ವಚನ ಸಾಹಿತ್ಯದ ಮೂಲಕ ಆದಿ ಗುರು ಬಸವಣ್ಣನವರು ನಮಗೆ ವಿಶೇಷ ಶರಣ ಪಥವನ್ನು ನೀಡಿದ್ದಾರೆ. ಅವರು ಬೋಧಿಸಿದ ತತ್ತ್ವದ ಸಾರ ಹೀಗಿದೆ.

ತತ್ತ್ವಗಳು ಷಡಾಚಾರಗಳು

1. ವಿಶ್ವಗುರು ಬಸವಣ್ಣನವರು ಸೃಷ್ಟಿಕರ್ತನು ಕಳಿಸಿದ ಪ್ರತಿನಿಧಿ, ದೇವರ ಕರುಣೆಯ ಕಂದ (ಬಸವಾಚಾರ)
2. ದೇವನು ಒಬ್ಬ; ಲಿಂಗದೇವನನ್ನು ಇಷ್ಟಲಿಂಗರೂಪದಲ್ಲಿ ಪೂಜಿಸಬೇಕು. (ಲಿಂಗಾಚಾರ);
3. ಪ್ರತಿಯೊಬ್ಬನೂ ಸತ್ಯಶುದ್ಧ ಕಾಯಕದಿಂದ ಗಳಿಸಬೇಕು. ದಾಸೋಹ ಭಾವದಿಂದ ಸಮಾಜಕ್ಕೆ ವಿನಿಯೋಗಿಸಬೇಕು (ಸದಾಚಾರ)
4. ಮಾನವರೆಲ್ಲರೂ ಸಮಾನರು. ನೀತಿ-ಸಂಸ್ಕಾರದಿಂದ ಶ್ರೇಷ್ಠರಾಗುವರು (ಶಿವಾಚಾರ)
5. ಅನ್ಯಾಯವನ್ನು-ಅಸತ್ಯವನ್ನು ಆತ್ಮಸ್ಥೈರ್ಯದಿಂದ ಎದುರಿಸಬೇಕು (ಗಣಾಚಾರ)
6. ವ್ಯಕ್ತಿಗಿಂತಲೂ ಸಮಾಜ-ಸಮಷ್ಟಿ ದೊಡ್ಡದೆಂದು ಭಾವಿಸಿ ವ್ಯಕ್ತಿಯು ಸಮಾಜದ ಸೇವೆ ಮಾಡಬೇಕು. (ಭೃತ್ಯಾಚಾರ)

ದರ್ಶನ ಶಾಸ್ತ್ರ : ಷಟಸ್ಥಲ - ಮಾನವ ಜೀವನದ ಗುರಿಯೇ ತಾನು ಹೊರಟ ಮೂಲ ನೆಲೆ-ಲಿಂಗದೇವನಲ್ಲಿ ಒಡವೆರೆದು ಒಂದಾಗುವುದು, ಅಂಗ ಲಿಂಗದೊಡನೆ ಒಂದಾಗಬೇಕಾದರೆ ಭಕ್ತ ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲ (stages) ಗಳನ್ನು ಅಳವಡಿಸಿಕೊಳ್ಳಬೇಕು.

ಆಚರಣೆ : ಅರ್ಚನೆ-ಅರ್ಪಣೆ-ಅನುಭಾವ. ದಿನನಿತ್ಯವೂ ಸೃಷ್ಟಿಕರ್ತನನ್ನು ಪೂಜಿಸುವುದು! ಕಾಯಕ ಮಾಡಿ ಊಟ ಮಾಡುವುದು; ಶರಣರ ಸಂಗದಲ್ಲಿ ಒಡನಾಡುವುದು.

ಲಾಂಛನಗಳು : ಭಕ್ತಿಯ ಅಭಿವ್ಯಕ್ತಿಗೆ ಅಷ್ಟಾವರಣಗಳಾದ ಗುರು-ಲಿಂಗ-ಜಂಗಮ-ವಿಭೂತಿ-ರುದ್ರಾಕ್ಷಿ-ಮಂತ್ರ, ಕರುಣೋದಕ-ಕರುಣ ಪ್ರಸಾದ ಅಳವಡಿಸಿಕೊಳ್ಳುವುದು.

ಸಪ್ತನೀತಿ ಸೂತ್ರ : ಕಳವು ಮಾಡದಿರುವುದು, ಕೊಲ್ಲದಿರುವುದು (ಅಹಿಂಸೆ), ಸುಳ್ಳು ಹೇಳದಿರುವುದು, ಕೋಪಗೊಳ್ಳದೆ ಸಮಾಧಾನ ಚಿತ್ತದಿಂದಿರುವುದು, ತನಗಿಂತ ಕೀಳಾದವರನ್ನು ತಿರಸ್ಕಾರದಿಂದ

ಕಾಣದಿರುವುದು, ಆತ್ಮಸ್ತುತಿ ಮಾಡದಿರುವುದು, ಪರನಿಂದೆ ಮಾಡದಿರುವುದು, ಅಂತರಂಗ ಶುದ್ಧಿ ಸಂಪಾದಿಸುವುದು, ಬಹಿರಂಗ ಶುದ್ಧಿ ಸಾಧಿಸುವುದು, ತನ್ಮೂಲಕ ದೇವನ ಕೃಪೆ ಪಡೆಯುವುದು.

ಜಗತ್ತಿನ ಅನೇಕ ಪ್ರವಾದಿಗಳು ಸುವ್ಯವಸ್ಥಿತ ರೂಪದಲ್ಲಿ ಧರ್ಮವನ್ನು ಕೊಡದೆ ಕೇವಲ ವಚನ ಸಂದೇಶ ಕೊಟ್ಟು ಹೋಗಿದ್ದರೂ ಕಾಲಾನಂತರದಲ್ಲಿ ಅವರ ಅನುಯಾಯಿಗಳು ಅತ್ಯಂತ ಸುಂದರವಾಗಿ ಸಂಘಟಿಸಿ ಕೊಂಡಿದ್ದಾರೆ. ತಮ್ಮ ಸ್ಥಾಪಕರು ಕೊಟ್ಟುದಕ್ಕಿಂತ ಚೆನ್ನಾಗಿ ಸರ್ವಾಂಗ ಸುಂದರವಾಗಿ ಬೆಳೆಸಿಕೊಂಡಿದ್ದಾರೆ. ನಮ್ಮಲ್ಲಿ ದುರ್ದೈವದ ಸಂಗತಿ ಎಂದರೆ ಧರ್ಮಗುರು ಬಸವಣ್ಣನವರು ಸುಸಂಬದ್ಧವಾಗಿ ಕೊಟ್ಟುದನ್ನು ಬೆಳೆಸಿಕೊಳ್ಳುವ ಬದಲಿಗೆ ಅಂದಗೆಡಿಸಿರುವುದನ್ನು ಕಾಣಬಹುದು. ತಪ್ಪನ್ನು ಈಗಲಾದರೂ ಆತ್ಮಾವಲೋಕನ ಮಾಡಿಕೊಂಡು ತಿದ್ದಿಕೊಳ್ಳುವುದು ಅತ್ಯಗತ್ಯವಾಗಿದೆ.

ಧರ್ಮದ ಗುರಿ ಒಟ್ಟುಗೂಡಿಸುವುದು - ಒಡೆಯುವುದಿಲ್ಲ

ವಿಶ್ವಗುರು ಬಸವಣ್ಣನವರು ವಿಶ್ವ ಕುಟುಂಬತ್ವದ ಬೋಧೆ ನೀಡಿದ್ದಾರೆ.

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಲಿಂಗದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯಾ

ಇವನಾರು? ಎಂದು ಪ್ರಶ್ನಿಸಿ ಜಾತಿ, ಉದ್ಯೋಗ, ಅಂತಸ್ತು ಹಿಡಿದು ಯಾರನ್ನೂ ತಿರಸ್ಕರಿಸದೆ ಎಲ್ಲರನ್ನೂ ನಮ್ಮವರು ಎಂದು ಆದರಿಸಬೇಕು. ಆಗ ಮಾತ್ರ ನಾವು ನಿಜವಾದ ದೇವಭಕ್ತರು, ದೇವರ ಮಕ್ಕಳು ಆಗಲು ಸಾಧ್ಯ.

ಇಂದು ಜಗತ್ತಿನಲ್ಲಿ, ಭಾರತ ಭೂಮಿಯಲ್ಲಿ ಧರ್ಮವು ಪರಸ್ಪರರನ್ನು ಒಡೆಯುವ ವಿಕೃತರೂಪ ಹೊಂದಿದೆ. ಕಾರಣವೇನೆಂದರೆ ಧರ್ಮವು ತನ್ನ ಮೂಲಸ್ವರೂಪವನ್ನು ಕಳೆದುಕೊಂಡು ಮತಾಂಧತೆ, ಜಾತ್ಯಂಧತೆ ಆಗಿರುವುದು. ಬಸವ ಧರ್ಮೀಯರಾದ ನಾವು ಈ ಲೋಪವನ್ನು ಅರಿತುಕೊಂಡು ಧರ್ಮವನ್ನು ಒಡೆಯುವ ಸಾಧನವಾಗಿ ಮಾಡಿಕೊಳ್ಳದೆ ಬೆಸೆಯುವ ಸಾಧನವನ್ನಾಗಿ ಮಾಡಿಕೊಳ್ಳಬೇಕು. ಹೇಗೆ ಪೃಥ್ವಿ ತನ್ನ ಅಕ್ಷದ ಮೇಲೆ ತಿರುಗುತ್ತಲೇ ಸೂರ್ಯನ ಸುತ್ತಲೂ ತಿರುಗುವುದೋ ಹಾಗೆ ನಮ್ಮ ಧರ್ಮಾಚರಣೆಯನ್ನು ನಾವು ನಿಷ್ಠೆಯಿಂದ ಪಾಲಿಸುತ್ತ ದೇಶದ ಹಿತಾಸಕ್ತಿ ಕಾಪಾಡಬೇಕು. ವಿಶ್ವ ಕುಟುಂಬತ್ವದ ಸಂದೇಶ ಸಾರಬೇಕು. ಇಂಥದೊಂದು ಪವಿತ್ರ ಸಂಕಲ್ಪವನ್ನು ಗಣ ಮೇಳದ ಇಂದು ತೊಡೋಣ.

-ಜಯ ಗುರು ಬಸವೇಶ ಹರಹರ ಮಹಾದೇವ.

ವಚನ ವಾಣಿ


ಬಸವಣ್ಣನಂತಹ ಪ್ರವಾದಿಯಿಲ್ಲ ಜಗದಿ
ಲಿಂಗಾನಂದರಂಥ ಪ್ರವಚನಯೋಗಿಯಿಲ್ಲ
ಮಾತಾಜಿಯಂಥ ಜ್ಞಾನಿಯೋಗಿಣಿಯಿಲ್ಲ
ರಾಷ್ಟ್ರೀಯ ಬಸವ ದಳದವರಂತಹ ತತ್ವನಿಷ್ಠರಿಲ್ಲ
ಲೀಲಾವಿಶೇಷ ಲಿಂಗದೇವ ನೀ ಸಾಕ್ಷಿಯಾಗಿ

– ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ










ಪೂಜ್ಯ ಗಂಗಾ ಮಾತಾಜಿಯವರಿಗೆ ಪೂಜ್ಯ ಶ್ರೀ ಮಾತಾಜಿಯವರು
ಕೂಡಲ ಸಂಗಮದ ಮುಂದಿನ ಪೀಠಾಧ್ಯಕ್ಷೆಯಾಗಿ ನೇಮಕ ಮಾಡುತ್ತಿರುವುದು





ಶರಣ ಮೇಳದಲ್ಲಿ ಕೂಡಿದ ಬೃಹತ್ ಶರಣ ಸಮೂಹ

January -February Sanchike Published on 09-02-2017
Name of the Printer - Sumuka Printers, Bengalure-560010
Registered with Registrar of News Papers in India, New Delhi No.19988/70
Postal Registration (SSP os BG-West Dn)No.KA/BGW-50/wpp-17/2015-17,
Licenced to Post the Printed Magazine without Prepayment (WPP-17).
Posted at Bengalure PSO, Mysuru Road, (Bg-560026) on 3rd, 10th,
20th of every month, Pages 32+4